www.janavaadi.in

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

## UGNEET-25: ಅಭ್ಯರ್ಥಿಗಳ ಸ್ಟೇ ವೇಕೆನ್ಸಿ ಆಯ್ಕೆ ದಾಖಲಾತಿಯ ದಿನಾಂಕ ವಿಸ್ತರಣೆ

ಬೆಂಗಳೂರು ಡಿ 14– ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ– ಪದವಿಪೂರ್ವ 2025 (UGNEET) ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ ಗಳ ಪ್ರವೇಶಕ್ಕೆ ಸ್ಟೈ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಗೆ ಅವಕಾಶ ನೀಡಲಾಗಿದೆ. ಹೊಸದಾಗಿ ಇಚ್ಛೆ/ಆಯ್ಕೆಗಳನ್ನು ದಾಖಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಏಇಎ) ತನ್ನ ಅಧಿಕೃತ ಜಾಲತಾಣದಲ್ಲಿ ಲಿಂಕ್ ತೆರೆದಿದೆ.

ಅಭ್ಯರ್ಥಿಗಳ ಆಯ್ಕೆ ದಾಖಲಿಸಲು ದಿನಾಂಕ ವಿಸ್ತರಣೆ ಮಾಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ತಿಳಿಸಿದರು.

ನಾರ್ಟಕ ಪರೀಕ್ಷಾ ಪ್ರಾಧಿಕಾರ (KEA) ಯುಜಿನೀಟ್ ಅಭ್ಯರ್ಥಿಗಳ ಸ್ಟೈ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಗೆ ಮೊದಲು ಡಿಸೆಂಬರ್ 12ರಂದು ಸಂಜೆ 5ಗಂಟೆವರೆಗೆ ಅವಕಾಶ ನೀಡಲಾಗಿತ್ತು. ಇದೀಗ ಅದನ್ನು ಡಿಸೆಂಬರ್ 15ರ ಬೆಳಗ್ಗೆ 11 ಗಂಟೆಗೆ ದಿನಾಂಕ ವಿಸ್ತರಣೆ ಮಾಡಲಾಗಿದೆ. ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಸಂಪುಟ : 12 ಸಂಚಿಕೆ : 129 ಪುಟ : 4 ರಾಯಚೂರು ಸೋಮವಾರ 15–12–2025 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.
VOLUME : 12 ISSUE : 129 PAGES : 4 RAICHUR MONDAY 15-12-2025 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ರಾಯಚೂರು ಪೇಟೆ ದರ

| | |
|---|---|
| **ಸಣ್ಣ ಭತ್ತ(ಸೋನಾ)** | |
| ಕನಿಷ್ಠ | 1901 |
| ಗರಿಷ್ಠ | 3028 |
| **ಒಣಕಡಲೆ** | |
| ಕನಿಷ್ಠ | 5302 |
| ಗರಿಷ್ಠ | 5302 |
| **ಕೆಂಪು ತೊಗರಿ** | |
| ಕನಿಷ್ಠ | 6055 |
| ಗರಿಷ್ಠ | 7429 |
| **ಶೇಂಗಾ (ಗುಂಗ್ರು)** | |
| ಕನಿಷ್ಠ | 4305 |
| ಗರಿಷ್ಠ | 4305 |
| **ಸೂರ್ಯಕಾಂತಿ** | |
| ಕನಿಷ್ಠ | – |
| ಗರಿಷ್ಠ | – |
| **ಈರುಳ್ಳಿ** | |
| ಕನಿಷ್ಠ | 650 |
| ಗರಿಷ್ಠ | 1750 |

## ರಾಯಚೂರು ಜಿಲ್ಲೆ

ಇಂದಿನ ಹವಾಮಾನ ಮುನ್ಸೂಚನೆ

ಗರಿಷ್ಠ : 29 ಸೆಲ್ಸಿಯಸ್
ಕನಿಷ್ಠ : 14 ಸೆಲ್ಸಿಯಸ್

# ವೋಟ್ ಚೋರಿ : ದೆಹಲಿಯ ರಾಮಲೀಲಾ ಮೈದಾನದಲ್ಲಿ ರಾಷ್ಟ್ರಮಟ್ಟದ ಬೃಹತ್ ಪ್ರತಿಭಟನೆ

ನವದೆಹಲಿ ಡಿ 14– ಕೇಂದ್ರ ಚುನಾವಣಾ ಆಯೋಗ ಮತ್ತು ಬಿಜೆಪಿ ವಿರುದ್ಧ ಮತಗಳ್ಳತನದ ಗಂಭೀರ ಆರೋಪ ಮಾಡಿರುವ ಕಾಂಗ್ರೆಸ್ ಪಕ್ಷ ಇಂದು ದೆಹಲಿಯಲ್ಲಿ ರಾಷ್ಟ್ರಮಟ್ಟದ ಬೃಹತ್ ಪ್ರತಿಭಟನೆ ನಡೆಸಿದೆ.



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ದೆಹಲಿಯ ರಾಮಲೀಲಾ ಮೈದಾನದಲ್ಲಿ ಪ್ರತಿಭಟನೆ ನಡೆಯಲಿದೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖವಿಂದರ್ ಸುಖು ಸಿಂಗ್ ಸೇ–ರಿದಂತೆ ಎಲ್ಲಾ ರಾಜ್ಯಗಳ ಶಾಸಕಾಂಗ ಪಕ್ಷಗಳ ನಾಯಕರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಶಾಸಕರು ಸಚಿವರು ಸಂಸದರು ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೇಂದ್ರ ಚುನಾವಣಾ ಆಯೋಗವನ್ನು ದುರುಪಯೋಗಪಡಿಸಿಕೊಂಡು ಬಿಜೆಪಿ ವಿವಿಧ ರಾಜ್ಯಗಳಲ್ಲಿ ಮತಗಳ್ಳತನ ಮಾಡಲಾಗಿದೆ ಎಂದು ಕಾಂಗ್ರೆಸ್ ಗಂಭೀರ ಆರೋಪ ಮಾಡಿದೆ. ಇತ್ತೀಚಿಗೆ ನಡೆದ ಮಹಾರಾಷ್ಟ್ರ, ಬಿಹಾರ ವಿಧಾನಸಭೆ ಚುನಾವಣೆಗಳಲ್ಲೂ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಗೆಲುವಿಗೆ ಮತಗಳ್ಳತನವೇ ಕಾರಣ ಎಂಬುದು ಕಾಂಗ್ರೆಸ್ಸಿನ ಗಂಭೀರ ಆರೋಪವಾಗಿದೆ. ಕೇಂದ್ರದಲ್ಲಿ ಎನ್ ಡಿ ಎ ಸರ್ಕಾರ ಅಧಿಕಾರಕ್ಕೆ ಬರಲು ಮತಗಳ್ಳತನವೇ ಕಾರಣ ಎಂದು ರಾಹುಲ್ ಗಾಂಧಿ ಹೇಳಿದ್ದರು.

ಕರ್ನಾಟಕದ ಮಹದೇವಪುರ ಮತ್ತು ಅಳಂದ ವಿಧಾನಸಭಾ ಕ್ಷೇತ್ರಗಳಲ್ಲಿ ಮತಗಳ್ಳತನವಾಗಿದೆ ಎಂದು ರಾಹುಲ್ ಗಾಂಧಿ ಪತ್ರಿಕಾಗೋಷ್ಠಿ ನಡೆಸಿ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದ್ದರು. ಅದರ ಬೆನ್ನಲ್ಲೇ ಹಲವಾರು ಕಡೆಗಳಲ್ಲಿ ಕ್ಷೇತ್ರ ಮಟ್ಟದ ಪ್ರತಿಭಟನೆಗಳಾಗಿತ್ತು.

ಕರ್ನಾಟಕದ ಕ್ಷೇತ್ರಗಳಲ್ಲಿ ಮತ್ತು ಮಹಾರಾಷ್ಟ್ರದ ಕೆಲವು ಕ್ಷೇತ್ರಗಳಲ್ಲಿ ಮತಗಳ್ಳತನ ನಡೆದಿರುವುದನ್ನು ರಾಹುಲ್ ಗಾಂಧಿ ದಾಖಲೆ ಸಹಿತ ಆರೋಪ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಇಂದು ನಡೆಯುತ್ತಿರುವ ಪ್ರತಿಭಟನೆ ಹೆಚ್ಚು ಗಮನ ಸೆಳೆದಿದೆ.

ಮತಗಳ್ಳತನವನ್ನು ತನಿಖೆಗೆ ಒಳಪಡಿಸಬೇಕು ಎಂಬುದು ಕಾಂಗ್ರೆಸ್ಸಿನ ಒತ್ತಾಯವಾಗಿತ್ತು. ಇತ್ತೀಚೆಗೆ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ರಾಹುಲ್ ಗಾಂಧಿ ವಿರುದ್ಧ ಕೇಂದ್ರ ಸರ್ಕಾರ ಮತ್ತೊಂದು ಪ್ರಕರಣ ದಾಖಲಾಗಿದೆ ಹಾಗೂ ಕೆಲವು ಪ್ರಮುಖ ನಾಯಕರುಗಳಿಗೆ ನೋಟಿಸ್ ನೀಡಲಾಗಿದೆ.

ಇದು ಕಾಂಗ್ರೆಸ್ ಪಕ್ಷವನ್ನು ಕೆರಳಿಸಿದೆ. ಪ್ರತಿಕಾರ ಎಂಬಂತೆ ಮತಗಳ್ಳತನವನ್ನು ಮುಂದಿಟ್ಟುಕೊಂಡು ಒಂದು ಲಕ್ಷ ಜನರನ್ನು ಸಂಘಟಿಸಿ ದೆಹಲಿಯಲ್ಲಿ ಬೃಹತ ಪ್ರತಿಭಟನೆಯ ಮೂಲಕ ಕಾಂಗ್ರೆಸ್ ತನ್ನ ಬಲ ಪ್ರದರ್ಶನ ಮಾಡುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಆರ್.ಬಿ.ತಿಮಾಪುರ್, ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ.ಹ–ರಿಪ್ರಸಾದ್, ಸೇರಿದಂತೆ ಬಹುತೇಕ ಸಚಿವರು, 50ಕ್ಕೂ ಹೆಚ್ಚು ಶಾಸಕರು ನಿನ್ನೆಯೇ ದೆಹಲಿ ತಲುಪಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತಮ ಬೆಂಬಲಿಗರೊಂದಿಗೆ ಇಂದು ದೆಹಲಿಯ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ.

ಕರ್ನಾಟಕದಲ್ಲಿ ಚಳಿಗಾಲದ ವಿಧಾನ ಮಂಡಳ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯಾದಿಯಾಗಿ ಎಲ್ಲಾ ಸಚಿವರು ಇಂದು ರಾತ್ರಿಯೇ ಬೆಳಗಾವಿಗೆ ವಾಪಸ್ಸಾಗಲಿದ್ದಾರೆ ಎಂದು ತಿಳಿದುಬಂದಿದೆ .ಪ್ರತಿಭಟನೆಯಲ್ಲಿ ಭಾಗವಹಿಸುವವರಿಗಾಗಿ ವಿಶೇಷ ರೈಲು ಅಥವಾ ರೈಲು ಭೋಗಿಗಳನ್ನು ವ್ಯವಸ್ಥೆ ಮಾಡಿಕೊಡಬೇಕು ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರು.

ಆದರೆ ರೈಲಿನ ವ್ಯವಸ್ಥೆಗೆ ಕೇಂದ್ರ ಸರ್ಕಾರ ಒಪ್ಪದ ಕಾರಣ, ಜಿಲ್ಲಾ ಉಸ್ತುವಾರಿ ಸಚಿವರು ತಮ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಪ್ರಮುಖ ನಾಯಕರುಗಳನ್ನು ಸ್ವಂತ ಖರ್ಚಿನಲ್ಲಿ ದೆಹಲಿಗೆ ಕರೆದುಕೊಂಡು ಹೋಗಬೇಕು ಎಂದು ಸೂಚನೆ ನೀಡಿದರು. ಅದರಂತೆ ಕೆಲವು ಸಚಿವರು ನೆನ್ನೆಯ ವಿಮಾನದ ಮೂಲಕ ದೆಹಲಿ ತಲುಪಿದ್ದಾರೆ. ಮತ್ತೊಂದಷ್ಟು ಜನ ದೆಹಲಿಗೆ ಪ್ರಯಾಣಿಸಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಂಸತ್ತಿನ ಚಳಿಗಾಲದ ಅಧಿವೇಶನ ನಡೆಯುತ್ತಿರುವುದರಿಂದಾಗಿ ಕಾಂಗ್ರೆಸ್ಸಿನ ಪ್ರತಿಭಟನೆ ದೆಹಲಿಯ ಭಯಂಕರ ಚಳಿಯಲ್ಲೂ ರಾಜಕೀಯವನ್ನು ಕಾವೇರಿಸಿತ್ತು.

ಮತಗಳ್ಳತನ ಕಾಂಗ್ರೆಸ್ಸಿನ ಹತಾಶೆಯ ಆರೋಪ ಎಂದು ಬಿಜೆಪಿ ಪದೇಪದೇ ಹೇಳುತ್ತಿದೆ. ಆರೋಪ ಮಾಡುವವರು ಪ್ರಮಾಣ ಪತ್ರದ ಮೂಲಕ ತಮ ಹೇಳಿಕೆಯನ್ನು ಪುನರ್ ಪ್ರತಿಪಾದಿಸಿದರೆ ತನಿಖೆ ನಡೆಸುವುದಾಗಿ ಚುನಾವಣಾ ಆಯೋಗ ತಿಳಿಸಿದೆ. ಆದರೆ ಆರೋಪ ಮಾಡುವವರು ಪ್ರಮಾಣ ಪತ್ರದ ಮೂಲಕ ತಮ್ಮ ಹೇಳಿಕೆಯ ಮೇಲಿನ ಬದ್ಧತೆಯನ್ನು ಪುನರ್ ಪ್ರತಿಪಾದಿಸಲು ನಿರಾಕ–ರಿಸಿದ್ದಾರೆ. ಈವರೆಗೂ ಯಾವ ನಾಯಕರು ಈವರೆಗೂ ಪ್ರಮಾಣ ಪತ್ರ ಸಲ್ಲಿಸಿಲ್ಲ. ಹೀಗಾಗಿ ಕಾಂಗ್ರೆಸ್ ನ ಪ್ರತಿಭಟನೆ ಕೇವಲ ರಾಜಕೀಯಕ್ಕೆ ಸೀಮಿತ ಎಂಬಂತಾಗಿದೆ.

## ಹೊಸ ರಾಜಕೀಯ ಪಕ್ಷ ಸ್ಥಾಪಿಸುವುದಾಗಿ ಮಾಜಿ ಸಚಿವ ಸಿಎಂ ಇಬ್ರಾಹಿಂ ಘೋಷಣೆ

ಬೆಂಗಳೂರು ಡಿ 14– ಶೀಘ್ರದಲ್ಲೇ ಹೊಸ ರಾಜಕೀಯ ಪಕ್ಷ ಸ್ಥಾಪಿಸುವುದಾಗಿ ಕೇಂದ್ರದ ಮಾಜಿ ಸಚಿವ ಸಿಎಂ ಇಬ್ರಾಹಿಂ ಅವರು ಶನಿವಾರ ಘೋಷಣೆ ಮಾಡಿದ್ದಾರೆ.



ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಿಗಾಗಿ ಮೂರನೇ ಶಕ್ತಿಯನ್ನು ತರಲು ಸಿದ್ಧನಾಗಿದ್ದೇನೆ, ಪಕ್ಷದ ಚಿಹ್ನೆ ನಿರ್ಧರಿಸಲು ಭಾನುವಾರ ಕಲಬುರಗಿಯಲ್ಲಿ ಸಭೆ ನಡೆಸಲಾಗುವುದು. ನಂತರ ಮೈಸೂರು ಮತ್ತು ಬೆಳಗಾವಿಯಲ್ಲಿ ಸಮಾನ ಮನಸ್ಕ ಜನರ ಸಭೆಗಳನ್ನು ನಡೆಸಲಾಗುವುದು. ನಮ್ಮ ಹೊಸ ಪಕ್ಷ ಬಸವಣ್ಣ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅವರ ಸಿದ್ಧಾಂತವನ್ನು ಅಳವಡಿಸಿಕೊಳ್ಳಲಿದೆ ಎಂದು ಹೇಳಿದರು.

ರಾಜ್ಯದ ಯಾವುದೇ ರಾಜಕೀಯ ಪಕ್ಷವು ದಲಿತ ಮತ್ತು ಮುಸ್ಲಿಂ ಮುಖ್ಯಮಂತ್ರಿಯಾಗಬೇಕೆಂದು ಹೇಳಲು ಸಿದ್ಧರಿಲ್ಲ. ಐದು ವರ್ಷಗಳ ಕಾಲ ಪರ್ಯಾಯ ಅಧಿಕಾರಕ್ಕಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಹೊಂದಾಣಿಕೆ ಮಾಡಿಕೊಂಡಂತೆ ಕಾಣುತ್ತಿದೆ.

ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ ಕೆ ಶಿವಕುಮಾರ್ ನಡುವಿನ ಕುರ್ಚಿ ಕಿತ್ತಾಟದ ☛4

## ಚುನಾವಣೆಗೆ 6 ತಿಂಗಳು ಬಾಕಿ ಇರುವಾಗ BJP ನಾಯಕರು ನನ್ನನ್ನು ಹುಡುಕ್ತಾರೆ – ಯತ್ನಾಳ್

ಚಿಕ್ಕೋಡಿ(ಬೆಳಗಾವಿ) ಡಿ 14– ಚುನಾವಣೆಗೆ ಆರು ತಿಂಗಳು ಬಾಕಿಯಿರುವಾಗ ಯತ್ನಾಳ್ ಎಲ್ಲಿ ಎಂದು ಬಿಜೆಪಿ ನಾಯಕರು ಹುಡುಕುತ್ತಾರೆ. ನಾನು ಈ ಬಾರಿ ಉಚಿತವಾಗಿ ಭಾಷಣ ಮಾಡುವುದಿಲ್ಲ, ಜೆಸಿಬಿ ಪಕ್ಷ ಪ್ರಾರಂಭ ಮಾಡುತ್ತೇನೆ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.



ಅಥಣಿ ಪಟ್ಟಣದಲ್ಲಿಂದು ಮರಾಠ ಸಮುದಾಯದ ವತಿಯಿಂದ ನಿರ್ಮಾಣವಾಗಿರುವ 45 ಅಡಿ ಎತ್ತರದ ಶಿವಾಜಿ ಮಹಾರಾಜರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿ, ಕಟುಕನೋರ್ವ ಗೋ ಹತ್ಯೆ ಮಾಡುವುದನ್ನು ನೋಡಿದ ಶಿವಾಜಿ ಮಹಾರಾಜರು, ಕತ್ತಿಯಿಂದ ಆತನ ರುಂಡ ಚೆಂಡಾಡಿ ಅವತ್ತೇ ಗೋಹತ್ಯೆಯನ್ನು ತಡೆದರು. 2028ಕ್ಕೆ ನಾವು ಶಿವಾಜಿ ಮಹಾರಾಜರ ರೀತಿ ಶೌರ್ಯ ತೋರಿಸಬೇಕಾಗಿದೆ ಎಂದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಎಲ್ಲರನ್ನೂ ಒಗ್ಗೂಡಿಸುವ ಕಾರ್ಯವನ್ನು ಮಾಡಿದರು. ಆದರೆ ವಿಜಯಪುರದಲ್ಲಿ ಕೆಲವು ಪಾಕಿಸ್ತಾನವನ್ನು ಬೆಂಬಲಿಸುವವರು ಇದ್ದಾರೆ. ಬಸವರಾಜ ಬೊಮ್ಮಾಯಿ ಕಾಲದಲ್ಲಿ ಮರಾಠ ನಿಗಮ ಸ್ಥಾಪನೆ ಚರ್ಚೆ ನಡೆದಿತ್ತು. ಅವತ್ತು ನಾವು ಧ್ವನಿ ಎತ್ತಿದ್ದರಿಂದ ನಿಗಮ ಸ್ಥಾಪನೆಯಾಯಿತು. ಮರಾಠಿ ಭಾಷೆ ವಿರೋಧ ಮಾಡುತ್ತೀರಿ, ಆದರೆ ಉರ್ದು ಭಾಷೆ ಪ್ರೀತಿ ಮಾಡುತ್ತೀರಿ, ಕೆಲವು ಕಡೆ ಉರ್ದು ಭಾಷೆ ಬರೆದಿದ್ದಾರೆ ಅದನ್ನು ತೆಗೆಯಿರಿ ಎಂದು ಸವಾಲೆಸೆದರು.

ಮಹಾರಾಷ್ಟ್ರದಲ್ಲಿ ದಲಿತರು ಶಿವಾಜಿಯನ್ನು ಆರಾಧಿಸುತ್ತಾರೆ: ಶಿವಾಜಿ ಮಹಾರಾಜರು ಮತ್ತು ಕರ್ನಾಟಕದ ನಡುವೆ ಸಂಬಂಧವಿತ್ತು. ಮೀಸಲಾತಿಯನ್ನು ಮೊದಲಿಗೆ ತಂದವರು ಕೊಲ್ಹಾಪುರ ಶಾಹು ಮಹಾರಾಜರು. ಮಹಾರಾಷ್ಟ್ರದಲ್ಲಿ ದಲಿತರು ಶಿವಾಜಿಯನ್ನು ಆರಾಧಿಸುತ್ತಾರೆ, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಉನ್ನತ ಶಿಕ್ಷಣ ಪಡೆದಿದ್ದರಲ್ಲಿ ಕೊಲ್ಹಾಪುರ ಸಂಸ್ಥಾನದ ಕೊಡುಗೆ ಇದೆ ಎಂದರು.

ಕೆಲವರು ನಮ್ಮ ಇತಿಹಾಸ ತಿದ್ದಿದ್ದಾರೆ: ಹಿಂದೆ ನಮ್ಮ ಇತಿಹಾಸಕಾರರು ಇತಿಹಾಸವನ್ನು ಹೇಗೆ ಬೇಕೋ ಹಾಗೆ ತಿರುಚಿದ್ದಾರೆ. ಅಕ್ಬರ್, ಔರಂಗಜೇಬ್, ಟಿಪ್ಪು ಬಗ್ಗೆ ಬರೆದಿದ್ದಾರೆ. ನಮ್ಮ ಶೌರ್ಯದ ಬಗ್ಗೆ ನಮಗೆ ಹೇಳಿಲ್ಲ, ☛4

## ದೀದಿ ಬಂಧನಕ್ಕೆ ಹಿಮಂತ ಬಿಸ್ವಾ ಶರ್ಮಾ ಆಗ್ರಹ

ಕೊಲ್ಕತ್ತಾ ಡಿ 14– ಫುಟ್ಬಾಲ್ ಐಕಾನ್ ಲಿಯೊನೆಲ್ ಮೆಸ್ಸಿ ಅವರ ಕಾರ್ಯಕ್ರಮದಲ್ಲಿ ಉಂಟಾದ ಅವ್ಯವಸ್ಥೆಯ ಬಗ್ಗೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅಸಮಾಧಾನ ವ್ಯಕ್ತಪಡಿಸಿದ್ದು, ಘಟನೆಗೆ ಕಾರಣರಾದ ಸಿಎಂ ಮಮತಾ ಬ್ಯಾನರ್ಜಿ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಬಂಗಾಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಕ್ರೀಡಾಕೂಟವನ್ನು ಹಾಳುಮಾಡಲು ಬೇರೂರಿರುವ ವಿಐಪಿ ಸಂಸ್ಕೃತಿಯೇ ಕಾರಣ ಎಂದು ಶರ್ಮಾ ಆರೋಪಿಸಿದ್ದಾರೆ.

ಕೋಲ್ಕತ್ತಾದಲ್ಲಿ ನಡೆದ ಮೆಸ್ಸಿಯ ಗೋಟ್ ಟೂರ್ 2025 ಕಾರ್ಯಕ್ರಮದ ಅವ್ಯವಸ್ಥೆ ಉಲ್ಲೇಖಿಸಿದ ಶರ್ಮಾ, ಹೊಣೆಗಾರಿಕೆ ಮೇಲಿನಿಂದ ಪ್ರಾರಂಭವಾಗಬೇಕು. ರಾಜ್ಯದ ಗೃಹ ಸಚಿವರು (ಸಿಎಂ ಮಮತಾ ಬ್ಯಾನರ್ಜಿ ಗೃಹ ಸಚಿವರೂ ಹೌದು) ಮತ್ತು ಕೋಲ್ಕತ್ತಾ ಪೊಲೀಸ್ ಆಯುಕ್ತರನ್ನು ಬಂಧಿಸಬೇಕಿತ್ತು. ಆದರೆ, ಅವರು ಕಾರ್ಯಕ್ರಮ ಆಯೋಜಕರ ಬಂಧನವನ್ನು ಸಮರ್ಥಿಸುತ್ತಿಲ್ಲ. ಮೊದಲ ಜವಾಬ್ದಾರಿ ರಾಜ್ಯದ ಗೃಹ ಸಚಿವರು ಮತ್ತು ಪೊಲೀಸ್ ಆಯುಕ್ತರು ಹೊರಬೇಕು ಎಂದು ಪ್ರತಿಪಾದಿಸಿದ್ದಾರೆ.

## ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ನಿಧನ

ಬೆಂಗಳೂರು ಡಿ 14– ದೇಶದ ಹಿರಿಯ ರಾಜಕಾರಣಿ, ದಾವಣಗೆರೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ (94) ಇಂದು ಸಂಜೆ ನಿಧನರಾದರು. ವಯೋಸಹಜ ಅನಾರೋಗ್ಯ ಹಿನ್ನೆಲೆಯಲ್ಲಿ ಕಳೆದ ಕೆಲ ದಿನಗಳಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.



ಜೂನ್ 16, 1931ರಲ್ಲಿ ದಾವಣಗೆರೆಯ ಶಾಮನೂರು ಗ್ರಾಮದಲ್ಲಿ ಜನಿಸಿದ್ದ ಶಾಮನೂರು ಶಿವಶಂಕರಪ್ಪ 6 ಬಾರಿ ಶಾಸಕರಾಗಿದ್ದರು. ಹಲವು ಮುಖ್ಯಮಂತ್ರಿಗಳ ಸಂಪುಟದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಶಾಮನೂರು ಅವರು ಅಖಿಲ ಭಾರತೀಯ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಮಹಾಸಭಾದಲ್ಲಿ ಅವರ ನೇತೃತ್ವದಲ್ಲಿ ಸಾಕಷ್ಟು ಕಾರ್ಯಕ್ರಮಗಳು ನಡೆದಿವೆ.

ಶಾಮನೂರು ಶಿವಶಂಕರಪ್ಪ ಅವರ ಪಾರ್ಥಿವ ಶರೀರವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಕಚೇರಿಗೆ ಕೊಂಡೊಯ್ಯಲು ಸಿದ್ಧತೆ ನಡೆಸಲಾಗುತ್ತಿದೆ. ಬಳ್ಳಾರಿ ರಸ್ತೆ, ಪ್ಯಾಲೇಸ್ ಗ್ರೌಂಡ್ ಎದುರುಗಡೆ ಇರುವ ಮುಖ್ಯ ಕಚೇರಿಗೆ ಕೊಂಡೊಯ್ಯಲಾಗುತ್ತಿದೆ. ಸ್ಪರ್ಶ ಆಸ್ಪತ್ರೆಯಿಂದ ವೀರಶೈವ ಮಹಾಸಭಾ ಕಚೇರಿಗೆ ಪಾರ್ಥಿವ ಶರೀರ ಶಿಫ್ಟ್ ಮಾಡಲಾಗುವುದು. ಅಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಬೆಳಗ್ಗೆಯೊಳಗೆ ದಾವಣಗೆರೆಗೆ ಪಾರ್ಥಿವ ಶರೀರ ರವಾನಿಸಲಾಗುತ್ತಿದೆ ಎಂಬ ಮಾಹಿತಿ ಅಖಿಲ ಭಾರತ ವೀರಶೈವ ಮಹಾಸಭಾ ಮೂಲಗಳಿಂದ ಲಭ್ಯವಾಗಿದೆ.

ಈಶ್ವರ ಖಂಡ್ರೆ ಸಂತಾಪ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಗೌರವಾಧ್ಯಕ್ಷರು ಮತ್ತು ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರ ನಿಧನಕ್ಕೆ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಸಂತಾಪ ಸೂಚಿಸಿದ್ದಾರೆ.

ವೀರಶೈವ ಲಿಂಗಾಯತ ಸಮಾಜದ ಗಣ್ಯರಾಗಿ, ನಾಯಕರಾಗಿ ನಮಗೆಲ್ಲ–ರಿಗೂ ಮಾರ್ಗದರ್ಶನ ನೀಡುತ್ತಿದ್ದ ನೇರ ನುಡಿಯ ಶಾಮನೂರು ಶಿವಶಂಕರಪ್ಪ ಅವರು ಈ ಹಿಂದೆ ವಸತಿ ಸಚಿವರಾಗಿ ಮತ್ತು ಕೊಡುಗೈ ದಾನಿಯಾಗಿ ಸಮಾಜಕ್ಕೆ ನೀಡಿರುವ ಕೊಡುಗೆ ಅಪಾರ ಎಂದು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಖ್ಯಾತವಾದ ದಾವಣಗೆರೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಸಾವಿರಾರು ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಉನ್ನತ ಶಿಕ್ಷಣಕ್ಕೆ ನೆರವಾಗಿದ್ದ ಶಾಮನೂರು ಅವರು ವೀರಶೈವ ಲಿಂಗಾಯತ ಸಮಾಜದ ಏಳಿಗೆಗಾಗಿ ಮತ್ತು ಸಂಘಟನೆಯನ್ನು ☛4

## ಅಧಿಕಾರಿಗಳಿಗೆ ಮಾಹಿತಿ ನೀಡಿ : ವೆಂಕಟೇಶ ಮಾಡಗೇರಿ



ಜನವಾದಿ ವಾರ್ತೆ

ಮುದಗಲ್ ಡಿ 14– ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸಮುದಾಯದ ಕುಂದು ಕೊರತೆಗಳ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ನೀಡಬೇಕೆಂದು ಪಿಎಸ್‌ಐ ವೆಂಕಟೇಶ ಮಾಡಗೇರಿ ಹೇಳಿದರು.

ಪೊಲೀಸ್ ಇಲಾಖೆ ವತಿಯಿಂದ ಸ್ಥಳೀಯ ಆರಕ್ಷಕ ಠಾಣೆಯ ವ್ಯಾಪ್ತಿಯಲ್ಲಿ ಬರುವ ನಾಗರಹಾಳ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮುಖಂಡರ ಸಭೆಯ ಉದ್ದೇಶಿಸಿ ಮಾತನಾಡಿದ ಅವರು ಸುತ್ತಲಿತನ ಗ್ರಾಮಗಳಲ್ಲಿ ಅಸ್ಪೃಶ್ಯತೆ ಆಚರಣೆ ದೌರ್ಜನ್ಯಗಳ ನಡೆದರೆ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಅವರಿಗೆ ರಕ್ಷಣೆ ನೀಡಲು ಪೊಲೀಸ್ ಇಲಾಖೆ ಸಿದ್ಧವಿದೆ ಅದೆ ರೀತಿ ಶಾಂತಿ ಸುವ್ಯವಸ್ಥೆ ಕಾಪಾಡಲು ಸಹಕಾರ ನೀಡಬೇಕೆಂದರು

ಈ ಸಂದರ್ಭದಲ್ಲಿ ಲಕ್ಕಪ್ಪ ನಾಗರಾಳ, ದೇವೇಂದ್ರಪ್ಪ ಭಜಂತ್ರಿ, ಸಂಗಪ್ಪ ಹಿರೇಮನಿ, ಬಸಪ್ಪ ಗೌಂಡಿ, ಮಹಾಂತೇಶ ಚಲವಾದಿ, ರಮೇಶ್ ಪೂಜಾರಿ, ಸುರೇಶ ಆರಕ್ಷಕ ಠಾಣೆಯ ಸಿಬ್ಬಂದಿಗಳಾದ ಅಮರೇಶ ಎಚ್, ಕೆ, ಶರಣಪ್ಪ ಲೆಕ್ಕಿಹಾಳ ಸೇರಿದಂತೆ ಮುಂತಾದವರು ಇದ್ದರು.

## ಚಳಿ ಮತ್ತು ಶೀತಗಾಳಿಗೆ ಥಂಡಾ ಹೊಡೆದ ರಾಜ್ಯದ ಜನ, ನಾಲ್ಕೈದು ದಿನ ಗಡಗಡ ನಡುಕ

ಬೆಂಗಳೂರು ಡಿ 14– ರಾಜ್ಯದಲ್ಲಿ ಕಳೆದ ಒಂದು ವಾರದಿಂದ ಚಳಿಯ ಪ್ರಮಾಣ ಹೆಚ್ಚಾಗಿದ್ದು, ಜೊತೆಗೆ ಶೀತಗಾಳಿಯಿಂದ ಜನರು ಹೈರಾಣ–ರಾಗಿದ್ದಾರೆ. ಕನಿಷ್ಠ ಹಾಗೂ ಗರಿಷ್ಠ ಉಷ್ಣಾಂಶದಲ್ಲಿ ಗಣನೀಯವಾಗಿ ಕುಸಿತವಾಗಿದೆ.



ಹವಾಮಾನ ವೈಪರೀತ್ಯದ ಪರಿಣಾಮದಿಂದ ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕನಿಷ್ಠ ಉಷ್ಣಾಂಶ ಕುಸಿತವಾಗಿದೆ. ಶೀತಗಾಳಿ ಬೀಸಲಿದ್ದು, ಜನರು ಮುನ್ನೆಚ್ಚರಿಕೆ ವಹಿಸುವಂತೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಾಗಿ ಚಳಿಯು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ರಾತ್ರಿವೇಳೆ ಮೈ ಕೊರೆಯುವ ಚಳಿಯು ಜೊತೆಗೆ ಬೆಳಗಿನ ಜಾವ ಹಲವೆಡೆ ಮಂಜು ಕವಿಯುತ್ತಿದೆ. ಅಲ್ಲದೆ, ಆಗಾಗ್ಗೆ ತಂಪಾದ ಮೇಲೆ ಗಾಳಿ ಬೀಸುತ್ತಿದ್ದು, ಚಳಿಯ ಪ್ರಮಾಣವನ್ನು ಮತ್ತಷ್ಟೂಹೆಚ್ಚಿಸುತ್ತಿದೆ. ಹಗಲು ವೇಳೆ ಬಿಸಿಲಿದ್ದರೂ ಶೀತಗಾಳಿಯಿಂದಾಗಿ ಚಳಿಯ ಅನುಭವ ಹೆಚ್ಚಾಗುತ್ತಿದೆ. ಹೀಗಾಗಿ ಜನರು ಸ್ವೆಟರ್ ಸೇರಿದಂತೆ ಬೆಚ್ಚನೆಯ ಹೊದಿಕೆಗಳ ಮೊರೆ ಹೋಗಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ಮಾಹಿತಿ ಪ್ರಕಾರ ಬೀದರ್‌ನಲ್ಲಿ ಕನಿಷ್ಠ ತಾಪಮಾನ 7.4 ಡಿ.ಸೆ.ನಷ್ಟು ದಾಖಲಾಗಿದ್ದು, ಚಳಿಯಿಂದ ನಡುಗುವಂತಾಗಿದೆ. ಗರಿಷ್ಠ ತಾಪಮಾನ 36.6 ಡಿ.ಸೆ.ನಷ್ಟು ಕಾರವಾರದಲ್ಲಿ ದಾಖಲಾಗಿದೆ. ಕರಾವಳಿ ಭಾಗದಲ್ಲಿ ಕನಿಷ್ಠ ಹಾಗೂ ಗರಿಷ್ಠ ತಾಪಮಾನದಲ್ಲಿ ಹೆಚ್ಚಳವಿದೆ. ಆದರೆ, ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ 15ಡಿ.ಸೆ. ಗಿಂತ ಕಡಿಮೆ ದಾಖಲಾಗುತ್ತಿದೆ. ಹೆಚ್ಚು ಕಡಿಮೆ ಇದೇ ರೀತಿಯ ವಾತಾವರಣ ನಾಲ್ಕೈದು ದಿನಗಳ ಕಾಲ ಮುಂದುವರೆಯುವ ಸಾಧ್ಯತೆಗಳಿವೆ.

ಬೆಳಗಾವಿಯಲ್ಲಿ 12 ಡಿ.ಸೆ., ವಿಜಯಪುರದಲ್ಲಿ 10 ಡಿ.ಸೆ., ಧಾರವಾಡದಲ್ಲಿ 9.5 ಡಿ.ಸೆ., ಗದಗದಲ್ಲಿ 10.6 ಡಿ.ಸೆ., ಕಲಬುರಗಿಯಲ್ಲಿ 15 ಡಿ.ಸೆ., ಕೊಪ್ಪಳದಲ್ಲಿ 13.3 ಡಿ.ಸೆ., ಹಾವೇರಿಯಲ್ಲಿ ☛4

## ಕಸಾಪ ದತ್ತಿ ಉಪನ್ಯಾಸ ಮಾಲಿಕೆ, ಅಂಬೇಶ್ವರ್ ಪರಿನಿರ್ವಾಣ ದಿನಾಚರಣೆ ಶಾಂತಿ, ನೆಮ್ಮದಿ ಇಲ್ಲದ ಸಮಾಜದಲ್ಲಿ ಆರ್ಥಿಕವಾಗಿ ಪ್ರಗತಿ ಅಸಾಧ್ಯ – ಮುರ್ತುಜಾ

ಜನವಾದಿ ವಾರ್ತೆ

ಸಿಂಧನೂರು ಡಿ 14 – ಭಾರತದಲ್ಲಿ ಅಸಹಿಷ್ಣುತೆ, ಪೂರ್ವಗ್ರಹ, ಹಿಂಸೆಗಳು ತಾಂಡವವಾಡುತ್ತಿವೆ. ಶಾಂತಿ, ನೆಮ್ಮದಿ ಇಲ್ಲದ ಸಮಾಜದಲ್ಲಿ ಎಂದಿಗೂ ಆರ್ಥಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಿಲ್ಲ ಎಂದು ಉಪನ್ಯಾಸಕ ಮಮ್ಮದ್ ಅಲಿ ಮುರ್ತುಜಾ ಹೇಳಿದರು.



ಮೆಟ್ರಿಕ್ ಪೂರ್ವ ಬಾಲಕಿಯರ ಅಂಬೇಡ್ಕರ್ ವಸತಿ ನಿಲಯದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಹಾಗೂ ತಾಲೂಕಾ ಘಟಕಗಳಿಂದ ಹಮ್ಮಿಕೊಂಡಿದ್ದ ದಿ.ಬಸಪ್ಪ ಪಿ, ದಿ.ಚನ್ನನಗೌಡ ಪಾಟೀಲ್ ದತ್ತಿ ಉಪನ್ಯಾಸ ಮಾಲಿಕೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಭಾರತೀಯರಲ್ಲಿ ಸಮಾನತೆ, ಪ್ರಜಾಸತಾತ್ಮಕ, ಭ್ರಾತೃತ್ವ ಭಾವನೆ, ಸೌಹಾರ್ದತೆ ಮತ್ತು ರಾಷ್ಟ್ರಪ್ರೇಮ ಅಳವಡಿಸಿಕೊಂಡರೆ ಸಮೃದ್ಧ ದೇಶ ನಿರ್ಮಾಣವಾಗುತ್ತದೆ. ಕೋಮು ಸಂಘರ್ಷದ ಭಾವನೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ. ಸಮಾಜದಲ್ಲಿ ಏಕತೆ, ಸೌಹಾರ್ದತೆ ☛4

# ಸಾರಿಗೆ ನಿಗಮಗಳ ಬಸ್‌ಗಳು ಅಪಘಾತ ಹಾಗೂ ಕೆಟ್ಟು ನಿಂತ ಸಂದರ್ಭದಲ್ಲಿ ತುರ್ತಾಗಿ ಸ್ಪಂದಿಸುವ ವಾಹನಗಳಿಗೆ ಚಾಲನೆ

ಬೆಂಗಳೂರು ಡಿ 14- ಸಾರಿಗೆ ನಿಗಮಗಳ ಬಸ್‌ಗಳು ಮಾರ್ಗಮಧ್ಯೆ ಅಪಘಾತ ಹಾಗೂ ಕೆಟ್ಟು ನಿಂತ ಸಂದರ್ಭದಲ್ಲಿ ತುರ್ತಾಗಿ ನೆರವಾಗಲು ಸ್ಪಂದನ ವಾಹನಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಈ ವಾಹನಗಳು ಕೆಎಸ್‌ಆರ್‌ಟಿಸಿ ಬಸ್ಸುಗಳು ಮಾರ್ಗಮಧ್ಯೆ ಅಪಘಾತ ಹಾಗೂ ಕೆಟ್ಟು ನಿಂತ ಸಂದರ್ಭದಲ್ಲಿ ವಾಹನವನ್ನು ಶೀಘ್ರವಾಗಿ ರಿಪೇರಿಗೊಳಿಸುವ ಸಲುವಾಗಿ ಮೊಬೈಲ್ ವರ್ಕ್‌ಶಾಪ್ ಮಾದರಿಯಲ್ಲಿ ಸೇರ್ಪಡೆಗೊಳಿಸಲು ಉದ್ದೇಶಿಸಲಾಗಿದೆ ಎಂದರು.



ಈ ವಾಹನಗಳನ್ನು ಬೆಂಗಳೂರು ಹಾಗೂ ಮೈಸೂರು ಕೇಂದ್ರ ಸ್ಥಳಗಳಲ್ಲಿ ನಿಯೋಜಿಸಲಾಗುತ್ತಿದ್ದು, ಇದರಿಂದ ಬೆಂಗಳೂರು ಸುತ್ತಮುತ್ತ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಪ್ರದೇಶದಲ್ಲಿ ಉಂಟಾಗುವ ಅಪಘಾತ/ಅವಘಡಗಳನ್ನು ಶೀಘ್ರದಲ್ಲಿ ಸ್ಪಂದಿಸಲು ಅನುಕೂಲವಾಗುತ್ತದೆ ಎಂದರು.

ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ರಾಜ್ಯದ ಹಾಗೂ ಅಂತರರಾಜ್ಯದ ಭಾಗಗಳಿಗೆ ವಿವಿಧ ಮಾದರಿಯ ಬಸ್ಸುಗಳು ವಿವಿಧ ಸ್ಥಳಗಳಿಗೆ ಕಾರ್ಯಾಚರಣೆಯಾಗುತ್ತಿದೆ. ಸದರಿ ಬಸ್ಸುಗಳು ವಿವಿಧ ಸ್ಥಳಗಳಲ್ಲಿ ತಾಂತ್ರಿಕ ದೋಷದಿಂದಾಗಿ ಕೆಟ್ಟು ನಿಲ್ಲುವ ಸಂದರ್ಭದಲ್ಲಿ, ಉಂಟಾಗುವ ಟ್ರಾಫಿಕ್ ಸಮಸ್ಯೆ ಪರಿಹರಿಸಲು ಈ ವಾಹನವು ಸಹಕಾರಿಯಾಗಲಿದ್ದು, ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ.

ಆದುದರಿಂದ, ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ಮೈಸೂರು ರಸ್ತೆ ಬಸ್ ನಿಲ್ದಾಣದ ತಾಂತ್ರಿಕ ಸಿಬ್ಬಂದಿಗಳು ವಾಹನ ಅವಘಡ/ಅಪಘಾತ ಸಮಯದಲ್ಲಿ ಶೀಘ್ರವಾಗಿ ಬಿಡಿಭಾಗಗಳು / ಇತರೆ ಪರಿಕರಗಳೊಂದಿಗೆ ಸದರಿ ಸ್ಥಳಗಳಿಗೆ ತೆರಳಿ ವಾಹನ ದುರಸ್ಥಿಗೊಳಿಸಲು ಮೊಬೈಲ್ ವರ್ಕಷಾಪ್ ವಾಹನವನ್ನು ಸೇರ್ಪಡೆಗೊಳಿಸಲು ಉದ್ದೇಶಿಸಲಾಗಿದೆ.

ಬಸ್ಸುಗಳು ಅಪಘಾತ/ಅವಘಡಕ್ಕೀಡಾದಲ್ಲಿ (ಬ್ರೇಕ್ ಡೌನ್) ಚಾಲಕ, ನಿರ್ವಾಹಕರಿಗೆ ತಕ್ಷಣದಲ್ಲಿ ಸಹಾಯ ನೀಡಲು ಹಾಗೂ ಗಾಯಗೊಂಡಿದಲ್ಲಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲು ಸಹ ಸ್ಪಂದನ ವಾಹನವು ಉಪಯುಕ್ತವಾಗುತ್ತದೆ.

ಪ್ರತಿ ವಾಹನದ ಬೆಲೆ ರೂ.7.22 ಲಕ್ಷಗಳಾಗುತ್ತದೆ. ಜನವರಿ-2026ರ ಅಂತ್ಯಕ್ಕೆ ಹೆಚ್ಚುವರಿಯಾಗಿ 10 ಹೊಸ ವಾಹನಗಳು ಸೇರ್ಪಡೆಗೊಳ್ಳಲಿದ್ದು, ಸದರಿ ವಾಹನಗಳನ್ನು ಉಳಿದ ಜಿಲ್ಲೆಗಳಿಗೆ ಕ್ರಮವಾಗಿ ನಿಯೋಜನೆ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಾಯುವ್ಯ ಸಾರಿಗೆ ಅಧ್ಯಕ್ಷ ಭರಮಗೌಡ(ರಾಜು) ಅಲಗೌಡ ಕಾಗೆ, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಅರುಣ್‌ಕುಮಾರ್ ಎಂ.ವೈ, ಪಾಟೀಲ, ಬಿಎಂಟಿಸಿ ಅಧ್ಯಕ್ಷ ವಿ.ಎಸ್.ಆರಾಧ್ಯ, ಕೆ-ಎಸ್‌ಆರ್‌ಟಿಸಿ ಉಪಾಧ್ಯಕ್ಷ ಮೊಹಮದ್ ರಿಜ್ವಾನ್, ನವಾಬ್, ವ್ಯವಸ್ಥಾಪಕ ನಿರ್ದೇಶಕ ಅಕ್ರಂಪಾಷಾ, ಬಿಎಂಟಿಸಿ ಎಂ.ಡಿ.ಶಿವಕುಮಾರ್, ವಾಯುವ್ಯ ಸಾರಿಗೆ ಎಂ.ಡಿ.ಪ್ರಿಯಾಂಗಾ, ಕಲ್ಯಾಣ ಕರ್ನಾಟಕ ಸಾರಿಗೆ ಎಂ.ಡಿ.ಡಾ.ಸುಶೀಲಾ ಮತ್ತಿತರರಿದ್ದರು.

# ಸಿಎಂ ಕುರ್ಚಿ ಕದನದ ನಡುವಲ್ಲೇ ದೆಹಲಿಗೆ ಸಿದ್ದು-ಡಿಕೆಶಿ: ಹೆಚ್ಚಿದ ಕುತೂಹಲ

ಬೆಂಗಳೂರು ಡಿ 14- ರಾಜ್ಯ ರಾಜಕೀಯದಲ್ಲಿ ಪವರ್ ಫೈಟ್ ಪಾಲಿಟಿಕ್ಸ್ ಜೋರಾಗಿದ್ದು, ಈ ನಡುವಲ್ಲೇ 'ವೋಟ್ ಚೋರಿ' ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಸೇರಿದಂತೆ 100ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ಶನಿವಾರ ತೆರಳಿಗೆ ತೆರಳಿದ್ದು, ಈ ಭೇಟಿ ವೇಳೆ ರಾಜ್ಯ ರಾಜಕೀಯ ವಿಚಾರ ಕುರಿತಂತೆಯೂ ಹೈಕಮಾಂಡ್ ಜೊತೆ ಚರ್ಚೆ ನಡೆಸುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.



ಸಚಿವ ಆರ್.ಬಿ. ತಿಮ್ಮಾಪುರ್ ಮತ್ತು ಎನ್. ಚೆಲುವರಾಯಸ್ವಾಮಿ, ಎಂಎಲ್ಸಿ ಬಿ.ಕೆ. ಹರಿಪ್ರಸಾದ್, ಮಾಜಿ ಸಚಿವ ಎಚ್.ಎಂ. ರೇವಣ್ಣ, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಸೇರಿದಂತೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಎರಡೂ ಬಣಗಳ ನಾಯಕರು ಶನಿವಾರ ರಾತ್ರಿ ದೆಹಲಿ ತೆರಳಿದ್ದಾರೆ.

ಈ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತರಾಗಿರುವ ಭಂಡಾರಿ ಅವರು, ಕರ್ನಾಟಕದ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಕುರಿತು ಹೈಕಮಾಂಡ್ ನಾಯಕರೊಂದಿಗೆ ಮಾತುಕತೆ ನಡೆಸುವ ಸುಳಿವು ನೀಡಿದರು.

ಇದೇ ವೇಳೆ ಮಾತನಾಡಿದ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು, ಮತದಾರರ ಹಕ್ಕುಗಳಿಗಾಗಿ ಹೋರಾಟವನ್ನು ಪ್ರಾರಂಭಿಸಿದ್ದೇವೆ, ಚಿಲುಮೆ ಎಂಬ ಎನ್‌ಜಿಒ ಮೂಲಕ ಬಿಜೆಪಿ ಚುನಾವಣಾ ವಂಚನೆ ಮಾಡಲು ಪ್ರಯತ್ನಿಸುತ್ತಿದೆ. ಕರ್ನಾಟಕದಿಂದ ಹೋರಾಟ ಆರಂಭಗೊಂಡಿದ್ದು, ಭಾನುವಾರ ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ರ್ಯಾಲಿ ನಡೆಯಲಿದೆ ಎಂದು ಹೇಳಿದರು.

ಕರ್ನಾಟಕದಿಂದ ಪಕ್ಷದ ಸಾವಿರಾರು ಕಾರ್ಯಕರ್ತರು, 100 ಕ್ಕೂ ಹೆಚ್ಚು ಶಾಸಕರು ಮತ್ತು ಎಂಎಲ್‌ಸಿಗಳು ಈ ರ್ಯಾಲಿಯಲ್ಲಿ ಭಾಗವಹಿಸುತ್ತಿದ್ದಾರೆ. ಮತಗಳ್ಳತನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಕಾಂಗ್ರೆಸ್ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ರ್ಯಾಲಿಯನ್ನು ನಡೆಸುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ರಾಜ್ಯ ರಾಜಕೀಯ ವಿಚಾರ ಚರ್ಚಿಸಲು ಹೈಕಮಾಂಡ್ ನಾಯಕರ ಭೇಟಿಯಾಗುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿ, ಶನಿವಾರ ತಡರಾತ್ರಿ ದೆಹಲಿಗೆ ಆಗಮಿಸಿದ್ದು, ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದ ನೋಟಿಸ್ ಕುರಿತು ನಾನು ಉತ್ತರ ನೀಡಬೇಕಾಗಿದೆ, ನಾನು ಅವರಿಗೆ ಎಲ್ಲಾ ದಾಖಲೆಗಳನ್ನು ನೀಡುತ್ತೇನೆಂದು ಹೇಳಿದರು.

ಮೂಲಗಳ ಪ್ರಕಾರ ಡಿಕೆ. ಶಿವಕುಮಾರ್ ತಮ್ಮ ಕಿರಿಯ ಸಹೋದರ ಮತ್ತು ಬೆಂಗಳೂರು ಗ್ರಾಮೀಣ ಮಾಜಿ ಸಂಸದ ಡಿಕೆ ಸುರೇಶ್ ಅವರೊಂದಿಗೆ ಶನಿವಾರ ಸಂಜೆ ದೆಹಲಿಗೆ ಭೇಟಿ ನೀಡಿದ್ದು, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಕೆಲವು ಶಾಸಕರೊಂದಿಗಿದ್ದ ಮನಸ್ತಾಪವನ್ನು ತಿಳಿಗೊಳಿಸಿರುವುದಾಗಿ ತಿಳಿಸಿದ್ದಾರೆಂದು ತಿಳಿದುಬಂದಿದೆ.

ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ನಡುವಲ್ಲೇ ಡಿಕೆ. ಶಿವಕುಮಾರ್ ಅವರು ತಮ್ಮ ಬೆಂಬಲಿಗರು ಆಯೋಜಿಸಿದ್ದ ಭೋಜನ ಕೂಟದಲ್ಲಿ ಭಾಗವಹಿಸಿದ್ದರು, ಇದರಲ್ಲಿ ಸುಮಾರು 30 ಕಾಂಗ್ರೆಸ್ ಶಾಸಕರು ಭಾಗವಹಿಸಿದ್ದರು ಎಂದು ತಿಳಿದುಬಂದಿದೆ.

ಇದಲ್ಲದೆ, ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರೊಂದಿಗೆ ಒಂದು ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದಾರೆ, ಈ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕೂಡ ಇದ್ದರು ಎಂದು ತಿಳಿದುಬಂದಿದೆ.

ಇದಕ್ಕೂ ಮೊದಲು, ಮಾಜಿ ಶಾಸಕ ಫಿರೋಜ್ ಸೇಠ್ ಆಯೋಜಿಸಿದ್ದ ಭೋಜನ ಕೂಟದಲ್ಲಿ ಸಿದ್ದರಾಮಯ್ಯ ಭಾಗವಹಿಸಿದ್ದರು, ಈ ಸಂದರ್ಭದಲ್ಲಿ ಹಲವಾರು ಮುಸ್ಲಿಂ ಶಾಸಕರು ಮುಖ್ಯಮಂತ್ರಿಯಾಗಿ ಮುಂದುವರಿಯಲು ಸಿದ್ದರಾಮಯ್ಯ ಅವರಿಗೆ ಬೆಂಬಲ ನೀಡಿದ್ದಾರೆಂದು ಮೂಲಗಳು ತಿಳಿಸಿವೆ.

# ನಗರದವರಿಗಿಂತಲೂ ಗ್ರಾಮೀಣ ಪ್ರದೇಶದ ಮಹಿಳೆಯರ ಉದ್ಯೋಗ ಪ್ರಮಾಣವೇ ಅಧಿಕ: ಅಧ್ಯಯನ

ಬೆಂಗಳೂರು ಡಿ 14- ಕರ್ನಾಟಕದ ಗ್ರಾಮೀಣ ಪ್ರದೇಶದ ಮಹಿಳೆಯರು ನಗರ ಪ್ರದೇಶಗಳ ಮಹಿಳೆಯರು ಮತ್ತು ಎರಡೂ ಕಡೆಯ ಪುರುಷರಿಗಿಂತ ಅನುಪಾತದಲ್ಲಿ ಉತ್ತಮ ಉದ್ಯೋಗದಲ್ಲಿದ್ದಾರೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ವರದಿ ತಿಳಿಸಿದೆ.



ಶುಕ್ರವಾರ ಬಿಡುಗಡೆಯಾದ ಹ್ಯಾಂಡ್‌ಬುಕ್ ಆಫ್ ಸ್ಟ್ಯಾಟಿಸ್ಟಿಕ್ಸ್ ಆನ್ ಇಂಡಿಯನ್ ಸ್ಟೇಟ್ಸ್ 2024-25 ವರದಿ ಪ್ರಕಾರ, ಪ್ರತಿ 1,000 ಗ್ರಾಮೀಣ ಮಹಿಳೆಯರಲ್ಲಿ ಕೇವಲ 9 ಜನರು ಮಾತ್ರ ನಿರುದ್ಯೋಗಿಗಳಾಗಿದ್ದರು. 2022-23ರಲ್ಲಿ 1,000 ಕ್ಕೆ 13 ಆಗಿತ್ತು ಎಂದು ಹೇಳಿದೆ. ಅದೇ ಅವಧಿಗಳಲ್ಲಿ ಪುರುಷರ ನಿರುದ್ಯೋಗ ಅನುಪಾತವು ಕ್ರಮವಾಗಿ 25 ಮತ್ತು 17 ಆಗಿತ್ತು.

ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಒಟ್ಟಾರೆ ನಿರುದ್ಯೋಗ ದರವು 2023-24ರಲ್ಲಿ 19 ಮತ್ತು 2022-23ರಲ್ಲಿ 15 ಎಂದು ದಾಖಲಾಗಿದೆ. ಇದು ಕ್ರಮವಾಗಿ ರಾಷ್ಟ್ರೀಯ ಸರಾಸರಿ 25 ಮತ್ತು 24 ಕ್ಕಿಂತ ಕಡಿಮೆಯಾಗಿದೆ. ನಗರ ಪ್ರದೇಶಗಳಲ್ಲಿ, 2023-24ರಲ್ಲಿ ಮಹಿಳೆಯರ ನಿರುದ್ಯೋಗ ದರವು 44 ಆಗಿತ್ತು ಮತ್ತು 2022-23ರಲ್ಲಿ ಅದು 51 ಆಗಿತ್ತು. 2023-24ರ ಆರ್ಥಿಕ ವರ್ಷದಲ್ಲಿ ನಗರದ ಪುರುಷ ನಿರುದ್ಯೋಗ ದರವು 41 ಮತ್ತು 2022-23ರಲ್ಲಿ ಅದು 38 ಆಗಿತ್ತು ಎಂದು ಆರ್‌ಬಿಐ ವರದಿ ತಿಳಿಸಿದೆ. 2023-24ರಲ್ಲಿ ಮತ್ತು 2022-23ರಲ್ಲಿ ನಗರ ಪ್ರದೇಶಗಳಲ್ಲಿ ಒಟ್ಟಾರೆ ನಿರುದ್ಯೋಗ ದರವು 42 ಆಗಿತ್ತು. 2023-24ರಲ್ಲಿ ಅಖಿಲ ಭಾರತ ನಿರುದ್ಯೋಗ ದರವು 51 ಮತ್ತು 2022-23ರಲ್ಲಿ 54 ಆಗಿತ್ತು.

'ಕರ್ನಾಟಕದಲ್ಲಿ ನಿರುದ್ಯೋಗವಿದೆ. ಆದರೆ, ಇತರ ರಾಜ್ಯಗಳು ಮತ್ತು ಭಾರತಕ್ಕೆ ಹೋಲಿಸಿದರೆ, ಅದು ಕಡಿಮೆ. ಗ್ರಾಮೀಣ ಮಹಿಳೆಯರ ಉದ್ಯೋಗ ದರದಲ್ಲಿನ ಏರಿಕೆ ಸಕಾರಾತ್ಮಕ ಸೂಚನೆಯಾಗಿದೆ. ಆದರೆ, ನಗರದ ಅಂಕಿಅಂಶಗಳನ್ನು ಗಮನಿಸಿದಾಗ ಇದು ಕಳವಳಕಾರಿಯಾಗಿದೆ. ಗೋವಾ, ಮಧ್ಯಪ್ರದೇಶ ಮತ್ತು ಜಾರ್ಖಂಡ್‌ನಲ್ಲಿ ಒಟ್ಟಾರೆ ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗ ದರಗಳು ಇನ್ನೂ ಕಡಿಮೆಯಾಗಿದೆ' ಎಂದು ರಾಜ್ಯ ಸರ್ಕಾರದ ಹಣಕಾಸು ತಜ್ಞರೊಬ್ಬರು ಹೇಳಿದ್ದಾರೆ.

ಒಟ್ಟು ರಾಜ್ಯ ದೇಶೀಯ ಉತ್ಪನ್ನ (GSDP) ಗಾತ್ರದಲ್ಲಿ ಕರ್ನಾಟಕವು ನಾಲ್ಕನೇ ಸ್ಥಾನದಲ್ಲಿದೆ. 2024-25ನೇ ಸಾಲಿಗೆ ಕರ್ನಾಟಕದ GSDP (ಪ್ರಸ್ತುತ ಬೆಲೆಗಳಲ್ಲಿ) 28,83,903.23 ಕೋಟಿ ರೂ. ಆಗಿದೆ. 2023-24ರಲ್ಲಿ ಇದು 25,57,241.35 ಕೋಟಿ ರೂ. ಆಗಿತ್ತು. 2024-25ನೇ ಹಣಕಾಸು ವರ್ಷದಲ್ಲಿ ಶೇ 12.8 ರಷ್ಟು ಒಟ್ಟಾರೆ ಉಖಆಕ ಬೆಳವಣಿಗೆ ಕಂಡಿದ್ದು, ತಮಿಳುನಾಡು (ಶೇ 16) ನಂತರದ ಸ್ಥಾನದಲ್ಲಿದೆ ಎಂದು ವರದಿ ತಿಳಿಸಿದೆ.

ಉತ್ತರ ಪ್ರದೇಶವು ಶೇ 12.7 ನೊಂದಿಗೆ ಕರ್ನಾಟಕಕ್ಕಿಂತ ಸ್ವಲ್ಪ ಹಿಂದಿದೆ ಮತ್ತು ಮಹಾರಾಷ್ಟ್ರವು ಶೇ 11.7 ನೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಗುಜರಾತ್‌ನ ಉಖಆಕ ಬೆಳವಣಿಗೆಯ ದರವು ಶೇ 10.2 ರಷ್ಟು ದಾಖಲಾಗಿದೆ. ಹೆಸರು ಬಹಿರಂಗಪಡಿಸಲು ಇಚ್ಛಿಸದ ಹಣಕಾಸು ಇಲಾಖೆಯ ಅಧಿಕಾರಿಯೊಬ್ಬರು, ಇತರ ರಾಜ್ಯಗಳು ಒಟ್ಟಾರೆ ನಗರದ ಉದ್ಯೋಗ ವಿಭಾಗದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದರೂ, ಕರ್ನಾಟಕದ ಜನಸಂಖ್ಯೆಯನ್ನು ಸಹ ಲೆಕ್ಕ ಹಾಕಬೇಕು ಎಂದು ಹೇಳಿದರು.

ಗ್ರಾಮೀಣ ಪ್ರದೇಶಗಳಲ್ಲಿ ಪುರುಷರ ಉದ್ಯೋಗ ಕುಸಿತಕ್ಕೆ ಕಾರಣವೇನು ಎಂಬುದನ್ನು ಅಧ್ಯಯನ ಮಾಡಬೇಕಾಗಿದೆ ಎಂದು ಅಧಿಕಾರಿ ಹೇಳಿದರು.

ಕೃಷಿ ವಲಯ ಮತ್ತು ಸ್ವಯಂ ಉದ್ಯೋಗದಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಉದ್ಯೋಗ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮಗಳು ಮಹಿಳೆಯರಿಗೆ ಉದ್ಯೋಗ ಪಡೆಯಲು ಅಥವಾ ಉಳಿಸಿಕೊಳ್ಳಲು ಸಹಾಯ ಮಾಡುತ್ತಿವೆ. ಆದಾಗ್ಯೂ, ನಗರ ಪ್ರದೇಶಗಳಲ್ಲಿ, ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗವನ್ನು ತೊರೆಯುತ್ತಿದ್ದಾರೆ, ಆದ್ದರಿಂದ ಮಹಿಳೆಯರು ಉದ್ಯೋಗದಲ್ಲಿ ಉಳಿಯಲು ಮತ್ತು ಕೆಲಸದಿಂದ ಹೊರಗುಳಿಯುವುದನ್ನು ಹೆಚ್ಚಿನ ಒತ್ತು ನೀಡಬೇಕಾಗಿದೆ ಎಂದು ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಹೇಳಿದರು.

ರಾಜ್ಯದ ಒಟ್ಟಾರೆ ನಿರುದ್ಯೋಗ ದರವು ಕಳವಳಕಾರಿಯಾಗಿದೆ. 'ಈ ವರದಿಯು 2023-24ರವರೆಗೆ ಮಾತ್ರ. ಆದರೆ, ಸ್ಪಷ್ಟ ಚಿತ್ರಣಕ್ಕಾಗಿ 2024-25 ಮತ್ತು 2025-26ರ ವಿಶ್ಲೇಷಣೆ ಅಗತ್ಯವಿದೆ.

# ಹುಬ್ಬಳ್ಳಿ ಮತ್ತು ವಿಜಯಪುರಕ್ಕೆ ಡಿ.24ರಂದು ವಿಶೇಷ ರೈಲು ಸೇವೆ, ಕೆಲವು ರೈಲುಗಳ ಸಂಚಾರದಲ್ಲಿ ವ್ಯತ್ಯಯ

ಬೆಂಗಳೂರು ಡಿ 14- ನೈರುತ್ಯ ರೈಲ್ವೆ (ಖಫಖ) ಡಿಸೆಂಬರ್ 24 ರಂದು ಬೆಂಗಳೂರಿನಿಂದ ಹುಬ್ಬಳ್ಳಿ ಮತ್ತು ವಿಜಯಪುರಕ್ಕೆ ವಿಶೇಷ ರೈಲು ಸಂಚಾರ ಸೇವೆ ಕಲ್ಪಿಸಲಿದೆ.



ರೈಲು ಸಂಖ್ಯೆ 07379 ಹುಬ್ಬಳ್ಳಿಯಿಂದ ಮಧ್ಯಾಹ್ನ 12 ಗಂಟೆಗೆ ಹೊರಟು ಹಾವೇರಿ, ಹರಿಹರ, ದಾವಣಗೆರೆ, ಅರಸೀಕೆರೆ ಮತ್ತು ತುಮಕೂರು ಮೂಲಕ ರಾತ್ರಿ 8.30 ಕ್ಕೆ ಯಶವಂತಪುರ ತಲುಪಲಿದೆ.

ರೈಲು ಸಂಖ್ಯೆ 06277 ಯಶವಂತಪುರದಿಂದ ರಾತ್ರಿ 9.50 ಕ್ಕೆ ಹೊರಟು ತುಮಕೂರು, ಅರಸೀಕೆರೆ, ದಾವಣಗೆರೆ, ಹರಿಹರ, ಬಾದಾಮಿ, ಬಾಗಲಕೋಟೆ ಮತ್ತು ಆಲಮಟ್ಟಿ ಮೂಲಕ ಬೆಳಗ್ಗೆ 9 ಗಂಟೆಗೆ ವಿಜಯಪುರ ತಲುಪಲಿದೆ.

ತುಮಕೂರು ಮತ್ತು ಮಲ್ಲಸಂದ್ರ ನಡುವೆ ಅಗತ್ಯ ಎಂಜಿನಿಯರಿಂಗ್ ಕಾಮಗಾರಿಗಳ ಕಾರಣ ಕೆಲ ರೈಲುಗಳ ಸಂಚಾರದಲ್ಲಿ ವ್ಯತ್ಯವಾಗುವ ಸಾಧ್ಯತೆ ಇದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ರೈಲು ಸಂಖ್ಯೆ 66567 ಕೆಎಸ್‌ಆರ್ ಬೆಂಗಳೂರು-ತುಮಕೂರು ಒಇಒಗ ಡಿಸೆಂಬರ್ 17, 20, 21 ಮತ್ತು 24ರಂದು ತುಮಕೂರು ಬದಲು ದೊಡಬೆಲೆನಲ್ಲಿ ಅಂತ್ಯಗೊಳ್ಳಲಿದೆ.

ರೈಲು ಸಂಖ್ಯೆ 66572 ತುಮಕೂರು-ಕೆಎಸ್‌ಆರ್ ಬೆಂಗಳೂರು ಒಇಒಗ ಡಿಸೆಂಬರ್ 17, 20 ಮತ್ತು 24ರಂದು ತುಮಕೂರು ಬದಲು ದೊಡಬೆಲೆನಿಂದ ಆರಂಭವಾಗಲಿದೆ.

ರೈಲು ಸಂಖ್ಯೆ 20652 ತಾಳಗುಪ್ಪ-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ಡಿಸೆಂಬರ್ 17, 21 ಮತ್ತು 24ರಂದು ಕೆಎಸ್‌ಆರ್ ಬೆಂಗಳೂರು ಬದಲು ಅರಸೀಕೆರೆಯಲ್ಲಿ ಅಂತ್ಯಗೊಳ್ಳಲಿದೆ.

ರೈಲು ಸಂಖ್ಯೆ 12725 ಕೆ-ಎಸ್‌ಆರ್ ಬೆಂಗಳೂರು-ಧಾರವಾಡ ಎಕ್ಸ್‌ಪ್ರೆಸ್ ಡಿಸೆಂಬರ್ 17, 20, 21 ಮತ್ತು 24ರಂದು ಕೆಎಸ್‌ಆರ್ ಬೆಂಗಳೂರು ಬದಲು ಅರಸೀಕೆರೆಯಿಂದ ಆರಂಭವಾಗಲಿದೆ.

ರೈಲು ಸಂಖ್ಯೆ 12726 ಧಾರವಾಡ-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ಡಿಸೆಂಬರ್ 17 ಮತ್ತು 24ರಂದು ಕೆಎಸ್‌ಆರ್ ಬೆಂಗಳೂರು ಬದಲು ಅರಸೀಕೆರೆಯಲ್ಲಿ ಅಂತ್ಯಗೊಳ್ಳಲಿದೆ.

ರೈಲು ಸಂಖ್ಯೆ 66571 ಕೆಎಸ್‌ಆರ್ ಬೆಂಗಳೂರು-ತುಮಕೂರು ಒಇಒಗ ಡಿಸೆಂಬರ್ 17 ಮತ್ತು 24ರಂದು ತುಮಕೂರು ಬದಲು ದೊಡಬೆಲೆನಲ್ಲಿ ಅಂತ್ಯಗೊಳ್ಳಲಿದೆ.

ರೈಲು ಸಂಖ್ಯೆ 66568 ತುಮಕೂರು-ಕೆಎಸ್‌ಆರ್ ಬೆಂಗಳೂರು ಒಇಒಗ ಡಿಸೆಂಬರ್ 17 ಮತ್ತು 24ರಂದು ತುಮಕೂರು ಬದಲು ದೊಡಬೆಲೆನಿಂದ ಆರಂಭವಾಗಲಿದೆ.

ರೈಲು ಸಂಖ್ಯೆ 56281 ಚಾಮರಾಜನಗರ-ತುಮಕೂರು ಪ್ಯಾಸೆಂಜರ್ ಡಿಸೆಂಬರ್ 17 ಮತ್ತು 24ರಂದು ತುಮಕೂರು ಬದಲು ಚಿಕ್ಕಬಾಣಾವರದಲ್ಲಿ ಅಂತ್ಯಗೊಳ್ಳಲಿದೆ.

**ಕೆಲ ರೈಲುಗಳ ಸಂಚಾರ ರದ್ದು**

ರೈಲು ಸಂಖ್ಯೆ 16239 ಚಿಕ್ಕಮಗಳೂರು-ಯಶವಂತಪುರ ಎಕ್ಸ್‌ಪ್ರೆಸ್, ರೈಲು ಸಂಖ್ಯೆ 16240 ಯಶವಂತಪುರ-ಚಿಕ್ಕಮಗಳೂರು ಎಕ್ಸ್‌ಪ್ರೆಸ್ ಮತ್ತು ರೈಲು ಸಂಖ್ಯೆ 12614 ಕೆಎಸ್‌ಆರ್ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ರೈಲುಗಳ ಸಂಚಾರ ಡಿಸೆಂಬರ್ 17 ಮತ್ತು 24ರಂದು ರದ್ದಾಗಿವೆ ಎಂದು ಪ್ರಕಟಣೆ ತಿಳಿಸಿದೆ.

# ಅಧಿವೇಶನದಲ್ಲಿ ಪಾಲ್ಗೊಳ್ಳದ ಶಾಸಕರಿಗೆ ಭತ್ಯೆ ಬೇಡ, ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತರಲು ಆಗ್ರಹ

ಬೆಳಗಾವಿ ಡಿ 14- ವಿಧಾನಮಂಡಲ ಚಳಿಗಾಲ ಅಧಿವೇಶನದ ಐದು ದಿನಗಳಲ್ಲಿ ಕೇವಲ ಎರಡು ದಿನ ಮಾತ್ರ ಉತ್ತರ ಕರ್ನಾಟಕದ ಚರ್ಚೆ ಆಗಿದೆ. ಅದರಲ್ಲೂ ಸಕ್ರಿಯವಾಗಿ ಈ ಭಾಗದ ಶಾಸಕರು ಭಾಗವಹಿಸಿಲ್ಲ. ಕೇವಲ ಡಿನ್ನರ್, ಲಂಚ್ ಮೀಟಿಂಗ್‌ಗಳಲ್ಲೇ ಅವರು ನಿರತರಾಗಿದ್ದಾರೆ. ಅದನ್ನು ಬಿಟ್ಟು ಇಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದರೆ ನಿಮ್ಮನ್ನು ಆರಿಸಿ ಕಳುಹಿಸಿದ್ದು ಸಾರ್ಥಕವಾಗುತ್ತಿತ್ತು ಎಂದು ಜನರು ಹೇಳುತ್ತಿದ್ದಾರೆ. ಇದೇ ವೇಳೆ, ಶಾಸಕರ ಕಡ್ಡಾಯ ಹಾಜರಾತಿಗೆ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತರಬೇಕೆನ್ನುವ ಆಗ್ರಹವೂ ಕೇಳಿ ಬರುತ್ತಿದೆ.





ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳಿಗೆ ಧ್ವನಿಯಾಗಬೇಕು, ಇಲ್ಲಿನ ಹಲವು ದಶಕಗಳ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು ಎಂಬ ಉದ್ದೇಶದಿಂದಲೇ ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧವನ್ನು ಕಟ್ಟಿ, ಪ್ರತೀ ವರ್ಷವೂ ಇಲ್ಲಿ ಹತ್ತು ದಿನಗಳ ಕಾಲ ಚಳಿಗಾಲ ಅಧಿವೇಶನ ನಡೆಸಲಾಗುತ್ತಿದೆ. ಆದರೆ, ಇದು ಕಾಟಾಚಾರದ ಅಧಿವೇಶನ, ಜಾತ್ರೆಗೆ ಬಂದ ರೀತಿಯಲ್ಲಿ ಸರ್ಕಾರ ಬಂದು ಹೋಗುತ್ತದೆ. ಉ.ಕ.ದ ಶಾಸಕರ ಹಾಜರಾತಿಯೇ ಕಡಿಮೆ ಇರುತ್ತದೆ. ಬೆಳಿಗ್ಗೆ ಸಹಿ ಮಾಡಿ ಹೋದವರು ವಾಪಸ್ ಸದನಕ್ಕೆ ಬರುವುದೇ ಇಲ್ಲ ಎಂಬ ದೂರುಗಳು ಪ್ರತಿವರ್ಷವೂ ಕೇಳಿ ಬರುತ್ತಿದೆ. ಈ ಸಲವೂ ಅದೇ ರೀತಿ ಆಗಿದೆ.

ಕಳೆದ ಐದು ದಿನಗಳಲ್ಲಿ ಅರ್ಧದಷ್ಟು ಶಾಸಕರು ಸದನದ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿಲ್ಲ. ಐದು ದಿನ ನಡೆದ ಚರ್ಚೆ ಉತ್ತರ ಕರ್ನಾಟಕ ಭಾಗಕ್ಕೆ ಯಾವುದೇ ರೀತಿಯಲ್ಲೂ ತೃಪ್ತಿಕರವಾಗಿಲ್ಲ. ಉ.ಕ.ಶಾಸಕರು ಒಟ್ಟಾಗಿ ಒಂದು ಸಭೆ ನಡೆಸಿ, ನಮ್ಮ ಭಾಗಕ್ಕೆ ಏನೆಲ್ಲ ಆಗಬೇಕೆಂದು ಚರ್ಚಿಸಿಲ್ಲ. ಅದನ್ನು ಬಿಟ್ಟು ತಮ್ಮ ರಾಜಕಾರಣಕ್ಕಾಗಿ ಡಿನ್ನರ್ ಪಾರ್ಟಿ ಮಾಡುತ್ತಿದ್ದಾರೆ. ಆ ಡಿನ್ನರ್ ಪಾರ್ಟಿಯಲ್ಲಿ ಈ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ನಾವೆಲ್ಲ ಚರ್ಚಿಸೋಣ ಎಂದಿದ್ದರೆ ನಿಮಗೆ ಬೇಷ್ ಎನ್ನುತ್ತಿದ್ದೆವು ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ.

**ಹಾಜರಿ ಪುಸ್ತಕಕ್ಕೆ ಸಹಿ ಮಾಡಿ ಹೋದವರಿಗೆ ಸೌಲಭ್ಯ ಕೊಡಬೇಡಿ:** ಈಟಿವಿ ಭಾರತ ಜೊತೆಗೆ ಮಾತನಾಡಿದ ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗಡಾದ ಅವರು, "ಅಧಿವೇಶನದಲ್ಲಿ ಎಲ್ಲ ಶಾಸಕರು ಭಾಗಿಯಾಗಲಿ ಎಂಬ ಉದ್ದೇಶದಿಂದ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನೂ ಮಾಡಲಾಗಿದೆ. ಈ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚರ್ಚಿಸುವುದು ಬಿಟ್ಟು ಬೆಳಿಗ್ಗೆ ಸದನಕ್ಕೆ ಬಂದು ಹಾಜರಿ ಪುಸ್ತಕದಲ್ಲಿ ಸಹಿ ಹಾಕಿ, ಆಮೇಲೆ ಎಲ್ಲಿಗೆ ಹೋಗುತ್ತಾರೋ ಗೊತ್ತಿಲ್ಲ. 224 ಶಾಸಕರ ಪೈಕಿ 110 ಶಾಸಕರು ಒಂದು ದಿನವೂ ಕುಳಿತಿಲ್ಲ. ದಿನದ ಭತ್ಯೆ ತೆಗೆದುಕೊಳ್ಳಲು ಮಾತ್ರ ಇಲ್ಲಿಗೆ ಬರುತ್ತಾರೆ. ಇದಕ್ಕೆಲ್ಲ ಕಡಿವಾಣ ಹಾಕಲು ಕಠಿಣ ನಿಯಮ ಜಾರಿಗೆ ತರಬೇಕು. ವಿಧಾನಸಭೆ, ವಿಧಾನಪರಿಷತ್ ಕಾರ್ಯ ಕಲಾಪಗಳಲ್ಲಿ ಸಂಪೂರ್ಣವಾಗಿ ಕುಳಿತುಕೊಳ್ಳುವುದಿಲ್ಲವೋ ಅಂಥವರಿಗೆ ಸರ್ಕಾರದ ಯಾವುದೇ ಸೌಲಭ್ಯ ನೀಡಲಾಗುವುದಿಲ್ಲ ಎಂದು ಸ್ಪೀಕರ್ ಕಠಿಣ ಆದೇಶ ಹೊರಡಿಸಬೇಕು" ಎಂದು ಒತ್ತಾಯಿಸಿದರು.

**ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತನ್ನಿ:** "ಜನರ ತೆರಿಗೆ ದುಡ್ಡಿನಲ್ಲಿ ಚೈನಿ ಮಾಡಲು ಇವರೆಲ್ಲ ಬೆಳಗಾವಿಗೆ ಬರುತ್ತಾರೆ. ಸರ್ಕಾರಿ ನೌಕರರಿಗೆ ಯಾವ ರೀತಿ ಬಯೋಮೆಟ್ರಿಕ್ ವ್ಯವಸ್ಥೆ ಇದೆಯೋ ಅದೇ ಮಾದರಿಯಲ್ಲಿ ಶಾಸಕರಿಗೂ ಬಯೋಮೆಟ್ರಿಕ್ ಅಳವಡಿಸಬೇಕು. ಮೂತ್ರ ವಿಸರ್ಜನೆಗೆ ತೆರಳಲು ಕೂಡ ಹಾಜರಿ ಪುಸ್ತಕದಲ್ಲಿ ಬರೆದು ಹೋಗುವಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಸದನಕ್ಕೆ ಗೌರವ ತರುವ ನಿಟ್ಟಿನಲ್ಲಿ ಶಾಸಕರು, ಪರಿಷತ್ ಸದಸ್ಯರು ಸಕ್ರಿಯವಾಗಿ ಕಲಾಪಗಳಲ್ಲಿ ಪಾಲ್ಗೊಳ್ಳಬೇಕು" ಎಂದು ಅವರು ಆಗ್ರಹಿಸಿದರು.

**ಡಿನ್ನರ್ ಮೀಟಿಂಗ್‌ನಲ್ಲಿ ಕಾಲಹರಣ:** "ಬೆಳಗಾವಿಯಲ್ಲಿ ಅಧಿವೇಶನ ನಡೆಸಲು ಬಂದಿರುವ ಇವರೆಲ್ಲ ಜನರ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಪರಿಹಾರ ಕಲ್ಪಿಸಲು ಬಂದಿಲ್ಲ. ರಾಜಕಾರಣ ಮಾಡಲು ಬಂದಿದ್ದಾರೆ. ಬ್ರೇಕ್ ಫಾಸ್ಟ್, ಲಂಚ್, ಡಿನ್ನರ್ ಮಿಟಿಂಗ್‌ಗಳಲ್ಲೇ ಕಾಲಹರಣ ಮಾಡುತ್ತಿದ್ದಾರೆ. ಏನೇನು ತಿಂದರು ಅಂತಾನೇ ಚರ್ಚೆ ಆಗುತ್ತಿರುವುದು ನಾಚಿಕೆಗೇಡಿನ ಸಂಗತಿ" ಎಂದು ಭೀಮಪ್ಪ ಗಡಾದ ಅಸಮಾಧಾನ ವ್ಯಕ್ತಪಡಿಸಿದರು.

"ಮುಖ್ಯಮಂತ್ರಿ ಕುರ್ಚಿ ಕಿತ್ತಾಟ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಗಂಡಸ್ತನ ಪ್ರದರ್ಶಿಸಬೇಕು. ಮುಖ್ಯಮಂತ್ರಿ ಬದಲಾವಣೆ ಮಾಡುತ್ತಿರೋ ಅಥವಾ ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸಬೇಕು. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ ಇಬ್ಬರ ತಲೆಯಲ್ಲೂ ಅವರ ಹೈಕಮಾಂಡ್ ಹುಳ ಬಿಟ್ಟಿದೆ. ಇನ್ನುಳಿದ ನಾಯಕರಿಗೂ ಒಂದು ಹುಳ ಬಿಟ್ಟಿದ್ದಾರೆ. ಈ ಹುಳ ಕಿತ್ತೊಗೆಯಬೇಕು. ಮುಖ್ಯಮಂತ್ರಿ ಬದಲಾವಣೆ ಮಾಡುವುದಿಲ್ಲ ಸರಳವಾಗಿ ಕೆಲಸ ಮಾಡಿ ಅಂತಾ ಹೇಳಬೇಕು. ಇಲ್ಲದಿದ್ದರೆ ಬದಲಾವಣೆ ಮಾಡುತ್ತೇವೆ, ಬಾಯಿ ಮುಚ್ಚಿ ಕುಳಿತುಕೊಳ್ಳಿ ಎಂದು ಹೇಳಬೇಕು. ಐದಾರು ತಿಂಗಳು ಸರ್ಕಾರ ಈ ಕುರ್ಚಿ ಗಲಾಟೆಯಲ್ಲೇ ದಿನದೂಡುತ್ತಿದೆ. ಅದನ್ನು ಬಿಟ್ಟು ತಮ್ಮ ಕ್ಷೇತ್ರದಲ್ಲಿ ಏನೆಲ್ಲಾ ಅಭಿವೃದ್ಧಿ ಮಾಡಿದ್ದಾರೆ ಎಂಬುದನ್ನು ಶಾಸಕರು ಹೇಳಬೇಕು. ಈಗ ಬಡವರಿಗೆ ಮಾಸಾಶನ ಕೂಡ ಸರಿಯಾಗಿ ಬರುತ್ತಿಲ್ಲ. ಮೊನ್ನೆ ಸಿಎಂ ಪ್ರತಿ ಶಾಸಕರಿಗೂ 25 ಕೋಟಿ ರೂ ಕೊಟ್ಟಿದ್ದರು. ಅದರಲ್ಲಿ ಅರ್ಧ ತಿಂದು ಇನ್ನುಳಿದ ಅರ್ಧ ಅನುದಾನ ಕೆಲಸ ಮಾಡಿದ್ದಾರೆ. ಈ ಸರ್ಕಾರ 50 ಪರ್ಸೆಂಟ್ ಕಮಿಷನ್ ಸರ್ಕಾರ" ಎಂದು ಭೀಮಪ್ಪ ಗಡಾದ ಆರೋಪಿಸಿದರು.

"ಈ ಭಾಗದ ರಾಜಕಾರಣಿಗಳು ತಮಗೆ ಲಾಭ ಆಗಬೇಕು ಎಂಬ ಉದ್ದೇಶದಿಂದಲೇ ದೊಡ್ಡ ಹೋಟೆಲ್, ಲಾಡ್ಜ್ ಕಟ್ಟಿದ್ದಾರೆ. ಯಾವ ಶಾಸಕರು ಪೂರ್ತಿ ಅಧಿವೇಶನದಲ್ಲಿ ಭಾಗವಹಿಸುತ್ತಾರೋ ಅವರಿಗೆ ಮಾತ್ರ ಭತ್ಯೆ ನೀಡಬೇಕು. ಇಲ್ಲದಿದ್ದರೆ ಆ ಹಣ ಅವರಿಂದಲೇ ವಸೂಲಿ ಮಾಡಬೇಕು" ಅಂತಾನೂ ಸರ್ಕಾರಕ್ಕೆ ಭೀಮಪ್ಪ ಗಡಾದ ಆಗ್ರಹಿಸಿದರು.

**ಐದು ದಿನಗಳಲ್ಲಾದ್ರೂ ಉ.ಕ.ಬಗ್ಗೆ ಸಮರ್ಪಕ ಚರ್ಚೆ ಆಗಲಿ:** "ಈಗ ಉಳಿದಿರುವ ಐದು ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಅನುದಾನ ಮೀಸಲಿಡುವ ಬಗ್ಗೆ ಚರ್ಚಿಸಿ, ಸದನದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು. ಸಮಗ್ರವಾಗಿ ಉ.ಕ. ಭಾಗದ ಸಮಸ್ಯೆಗಳ ಬಗ್ಗೆಯೇ ಸದನದಲ್ಲಿ ಚರ್ಚಿಸಲು ಈ ಅಧಿವೇಶನದ ಸಮಯ ಮೀಸಲಿಡಬೇಕು. ಅದನ್ನು ಬಿಟ್ಟು ಮೈಸೂರು ಭಾಗದ ಸಮಸ್ಯೆಗಳನ್ನು ಇಲ್ಲಿ ಚರ್ಚಿಸಬಾರದು. ಕಾರ್ಯದರ್ಶಿ ಮಟ್ಟದ ಕಚೇರಿಗಳನ್ನು ಸುವರ್ಣ ವಿಧಾನಸೌಧದಲ್ಲಿ ಆರಂಭಿಸುವ ಬಗ್ಗೆಯೂ ಸರ್ಕಾರ ಸ್ಪಷ್ಟಪಡಿಸಬೇಕು. ತಿಂಗಳಲ್ಲಿ ಒಂದು ಸಚಿವ ಸಂಪುಟ ಸಭೆ ಸುವರ್ಣ ವಿಧಾನಸೌಧದಲ್ಲಿ ನಡೆಸಬೇಕು. ದೂರದ ಬೀದರ ಜನರು ಬೆಂಗಳೂರಿಗೆ ಹೋಗಿ ಬರಲು ಹತ್ತು ಸಾವಿರ ರೂ. ಖರ್ಚಾಗುತ್ತದೆ. ಹಾಗಾಗಿ, ಮಂತ್ರಿಗಳು ಇಲ್ಲಿ ಬಂದು ಕುಳಿತು ಸಾರ್ವಜನಿಕರ ಮನವಿ ಸ್ವೀಕರಿಸುವ ಕೆಲಸ ಮಾಡಬೇಕು" ಎಂಬುದು ಭೀಮಪ್ಪ ಗಡಾದ ಒತ್ತಾಯ.

## ನಮ್ಮ ಸಿರವಾರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಸಿರವಾರ, ಜಿಲ್ಲಾ ರಾಯಚೂರು

### ಪತ್ರಿಕಾ ಪ್ರಕಟಣೆ

**ನಮ್ಮ ಸಿರವಾರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಸಿರವಾರ,** ಜಿಲ್ಲಾ ರಾಯಚೂರಿನ ಸಹಕಾರಿ ಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ ಯು ಸಹಕಾರಿಯ ಕಚೇರಿಯಲ್ಲಿ **ದಿ. 26-12-2025 ರಂದು ಶುಕ್ರವಾರ** ನಡೆಯಲಿದೆ. ನಾಮಪತ್ರ ಸಲ್ಲಿಸಲು ಆಕಾಂಕ್ಷೆ ಇರುವ ಅಭ್ಯರ್ಥಿಗಳು **ದಿ. 13-12-2025 ರಿಂದ 19-12-2025 ಮಧ್ಯಾಹ್ನ 3 ಗಂಟೆ ವರೆಗೆ** ನಾಮಪತ್ರ ಸಲ್ಲಿಸಬಹುದು. **ದಿ. 20-12-2025 ರಂದು** ನಾಮಪತ್ರಗಳ ಪರಿಶೀಲನೆ, **21-12-2025 ರಂದು** ಮಧ್ಯಾಹ್ನ 3 ರ ವರೆಗೆ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ.

ಸಹಕಾರಿಯು ಸದಸ್ಯರು ಗಳಿಗೆ ಈಗಾಗಲೇ ಚುನಾವಣಾ ವೇಳಾಪಟ್ಟಿಯನ್ನು ಕಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಕಾರಿ ಯಲ್ಲಿ ರಿಟರ್ನಿಂಗ್ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ಮೂಲಕ ಕೋರಲಾಗಿದೆ.

ದಿನಾಂಕ: 13-12-2025
ಸ್ಥಳ: ಸಿರವಾರ

ಸಹಿ/-
(ಜಿಂದಪ್ಪ)
ರಿಟರ್ನಿಂಗ್ ಅಧಿಕಾರಿ
ನಮ್ಮ ಸಿರವಾರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ,ಸಿರವಾರ, ಜಿಲ್ಲಾ ರಾಯಚೂರು.

# ಗ್ರಾಹಕರಿಗೆ ಉಪಯುಕ್ತವಾದ ಕ್ಯಾಲೆಂಡರ್ – ವಿಶ್ವನಾಥ ಹಿರೇಮಠ

ಜನವಾದಿ ವಾರ್ತೆ



ಸಿಂಧನೂರು ಡಿ 14 – ಭಾರತದ ವೈವಿಧ್ಯತೆಗೆ ಅನುಗುಣವಾಗಿ ನಡೆಯುವ ಅನೇಕ ಹಬ್ಬಗಳು, ಪ್ರಾದೇಶಿಕ ಆಚರಣೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕ್ಯಾಲೆಂಡರ್ ಒಳಗೊಂಡಿದ್ದು, ಗ್ರಾಹಕರಿಗೆ ತುಂಬಾ ಉಪಯುಕ್ತವಾಗಿದೆ ಎಂದು ವಿಕಾಸ ಬ್ಯಾಂಕಿನ ಅಧ್ಯಕ್ಷ ವಿಶ್ವನಾಥ ಚ.ಹಿರೇಮಠ ಹೇಳಿದರು.

ಸಿಂಧನೂರು ನಗರದ ಬಸವ ಸರ್ಕಲ್ ಹತ್ತಿರದ ಶ್ರೀ ಜಗದ್ಗುರು ಪಂಚಾಚಾರ್ಯ ಸೌಹಾರ್ದ ಸಹಕಾರಿಯ 2026 ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ನಾಡಿನ ಹಬ್ಬ ಹರಿದಿನಗಳು, ಜಾತ್ರೆಗಳು, ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಜಯಂತಿ, ಕ್ರಿಸ್‌ಮಸ್, ಸರ್ಕಾರಿ ರಜೆ ದಿನಗಳ ಮಾಹಿತಿ, ದಾರ್ಶನಿಕರ ಜಯಂತಿಗಳು, ಇವುಗಳ ದಿನಾಂಕ ಮೊದಲೇ ನಿಗದಿಪಡಿಸಿರುವುದರಿಂದ ದೀರ್ಘ ವಾರಾಂತ್ಯಗಳು ಅಥವಾ ಹಬ್ಬದ ರಜಾ ದಿನಗಳಲ್ಲಿ ರಜೆಗಳು, ಪ್ರವಾಸಗಳು ಅಥವಾ ಕುಟುಂಬ ಕಾರ್ಯಕ್ರಮಗಳನ್ನು ಯೋಜಿಸಬಹುದಾಗಿದೆ. ಮುಂಜಾಗೃತೆ ಪಡೆಯಲು ಮತ್ತು ತಿಳಿಯಲು ಕ್ಯಾಲೆಂಡರ್ ಮತ್ತು ಪಂಚಾಂಗಗಳು ಪ್ರತಿಯೊಬ್ಬರ ಬದುಕಿನಲ್ಲಿ ಅತ್ಯಾವಶ್ಯವಾಗಿವೆ. 2026 ನೂತನ ಹೊಸ ವರ್ಷ ಸರ್ವರಿಗೂ ಸುಖ ಶಾಂತಿ ಸಮೃದ್ಧಿ ತರಲಿ ಎಂದರು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷ ಎಸ್.ಎಸ್.ಹಿರೇಮಠ, ಉಪಾಧ್ಯಕ್ಷ ಬಸವರಾಜ ಸಣ್ಣಜಿನ್, ಸದಸ್ಯರಾದ ಸೈಯ್ಯದ್ ಖಲೀಲ್ ಅಹ್ಮದ್, ಆನಂದ ಹಿರೇಮಠ, ಲಿಂಗರಾಜ ಕರಡಕಲ್ಲ, ಸಹನಾ ಹಿರೇಮಠ, ಕವಿತಾ ಹಿರೇಮಠ, ಸಿಇಓ ಲಿಂಗನಗೌಡ, ಸಿಬ್ಬಂದಿ ಅಕ್ಷಯ ಕುಮಾರ ಕುಲಕರ್ಣಿ, ಶೇಖರಪ್ಪ ಬಾಲಿ ಮತ್ತಿತರರು ಇದ್ದರು.

# ಪೊಂಗಲ್ ಹಬ್ಬಕ್ಕೆ ತಮಿಳುನಾಡಿಗೆ ಪ್ರಧಾನಿ ಮೋದಿ ಭೇಟಿ

ನವದೆಹಲಿ ಡಿ 14– ತಮಿಳುನಾಡಿನಲ್ಲಿ ಕೇಸರಿ ಬಾವುಟ ಹಾರಿಸಲು ಬಿಜೆಪಿ ಸಿದ್ಧತೆ ನಡೆಸುತ್ತಿರುವ ಬೆನ್ನಲ್ಲೇ ಪೊಂಗಲ್ ಸಂದರ್ಭದಲ್ಲಿ ದ್ರಾವಿಡ ನಾಡಿಗೆ ಭೇಟಿ ನೀಡಲು ಪ್ರಧಾನಿ ನರೇಂದ್ರ ಮೋದಿ ನಿರ್ಧ–ರಿಸಿದ್ದಾರೆ.ಜನವರಿ 13 ರಿಂದ 15 ರವರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ತಮಿಳುನಾಡಿಗೆ ಮೂರು ದಿನಗಳ ಭೇಟಿ ನೀಡಲಿದ್ದು, ಈ ಸಂದರ್ಭದಲ್ಲಿ ರೈತರೊಂದಿಗೆ ಪೊಂಗಲ್ ಆಚರಣೆಯಲ್ಲಿ ಭಾಗವಹಿಸುವ ಸಾಧ್ಯತೆಯಿದೆ ಎಂದು ರಾಜ್ಯ ಬಿಜೆಪಿ ಮೂಲಗಳು ತಿಳಿಸಿವೆ.

2026 ರ ವಿಧಾನಸಭಾ ಚುನಾವಣೆಗೆ ಮುನ್ನ ನಡೆಯಲಿರುವ ಈ ಪ್ರಸ್ತಾವಿತ ಭೇಟಿಯನ್ನು ಪಕ್ಷದೊಳಗೆ ಗ್ರಾಮೀಣ ಮತದಾರರು ಮತ್ತು ರಾಜ್ಯದಲ್ಲಿ ಸಾಂಸ್ಕೃತಿಕ ಬಲವರ್ಧನೆಗಾಗಿ ಉದ್ದೇಶಿಸಲಾದ ಪ್ರಮುಖ ಸಂಪರ್ಕ ಉಪಕ್ರಮವೆಂದು ಪರಿಗಣಿಸಲಾಗಿದೆ.

ಪೊಂಗಲ್ ಹಬ್ಬದ ಆಸುಪಾಸಿನಲ್ಲಿ ಈ ಭೇಟಿಯನ್ನು ಯೋಜಿಸಲಾಗಿದ್ದು, ಸಾಂಪ್ರದಾಯಿಕ ಸುಗ್ಗಿಯ ಆಚ–'ರಣೆಗಳಿಗಾಗಿ ಪ್ರಧಾನಿಯವರು ತಮಿಳುನಾಡಿನ ರೈತರೊಂದಿಗೆ ಸೇರುವ ನಿರೀಕ್ಷೆಯಿದೆ ಎಂದು ಹಿರಿಯ ಭಾರತೀಯ ಜನತಾ ಪಕ್ಷದ (ಬಿಜೆಪಿ) ನಾಯಕರು ತಿಳಿಸಿದ್ದಾರೆ.

ತಮಿಳು ಸಂಸ್ಕೃತಿ ಮತ್ತು ಗುರುತಿನ ಮೇಲೆ ಅದರ ಒತ್ತು ನೀಡುವುದರ ಜೊತೆಗೆ ಗ್ರಾಮೀಣ ಸಮುದಾಯಗಳೊಂದಿಗೆ ಬಿಜೆಪಿಯ ಸಂಬಂಧವನ್ನು ಬಲಪಡಿಸುವ ಗು–ರಿಯನ್ನು ಈ ಸಂಪರ್ಕ ಹೊಂದಿದೆ ಎಂದು ಪಕ್ಷದ ಮೂಲಗಳು ಸೂಚಿಸಿವೆ. ತಾತ್ಕಾಲಿಕ ಪ್ರಯಾಣದ ವೇಳಾಪಟ್ಟಿಯ ಪ್ರಕಾರ, ತಮಿಳುನಾಡು ಮತ್ತು ಕಾಶಿ ನಡುವಿನ ನಾಗರಿಕ ಮತ್ತು ಸಾಂಸ್ಕೃತಿಕ ಸಂಪರ್ಕಗಳನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ರಾಮೇಶ್ವರಂನಲ್ಲಿ ನಡೆಯುವ ಕಾಶಿ ತಮಿಳು ಸಂಗಮಮ್ 4.0 ರ ಸಮಾರೋಪ ಸಮಾರಂಭದಲ್ಲಿ ಪ್ರಧಾನಿ ಮೋದಿ ಭಾಗವಹಿಸುವ ನಿರೀಕ್ಷೆಯಿದೆ.

ಪುದುಕ್ಕೋಟ್ಟೈನಲ್ಲಿ ನಡೆಯಲಿರುವ ಬಿಜೆಪಿ ತಮಿಳುನಾಡು ಅಧ್ಯಕ್ಷ ನೈನಾರ್ ನಾಗೇಂದ್ರನ್ ನೇತೃತ್ವದಲ್ಲಿ ರಾಜ್ಯಾದ್ಯಂತ ನಡೆಯುವ ತಮಿಳಗಂ ತಲೈ ನಿಮಿರ ತಮಿಳನಿನ್ ಪಯ–ಣಂ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಭಾಗವಹಿಸುವ ಸಾಧ್ಯತೆಯಿದೆ.

ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ, ರೈತರೊಂದಿಗೆ ಪ್ರಧಾನಿಯವರ ಪೊಂಗಲ್ ಆಚ–'ರಣೆಯಲ್ಲಿ ಭಾಗವಹಿಸುವುದು ಬಲವಾದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದೇಶವನ್ನು ರವಾನಿಸುತ್ತದೆ ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಹೇಳಿದರು.

ಈ ಭೇಟಿಯು ಕೃಷಿ ಸಮಸ್ಯೆಗಳ ಮೇಲೆ ಪಕ್ಷದ ಗಮನವನ್ನು ಕೇಂದ್ರೀಕರಿಸುವುದರ ಜೊತೆಗೆ ತಮಿಳು ಸಂಪ್ರದಾಯಗಳು ಮತ್ತು ಭಾವನೆಗಳೊಂದಿಗೆ ಸಂಪರ್ಕ ಸಾಧಿಸುವ ಪ್ರಯತ್ನಗಳನ್ನು ಬಲಪಡಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.ಪ್ರಸ್ತಾವಿತ ಭೇಟಿಯು ಮೈತ್ರಿಕೂಟದ ಮುಂಭಾಗದಲ್ಲಿನ ನಿರ್ಣಾಯಕ ಬೆಳವಣಿಗೆಗಳೊಂದಿಗೆ ಹೊಂದಿಕೆಯಾಗುವ ನಿರೀಕ್ಷೆಯಿದೆ.

## 1000 ಕೋಟಿ ಡಿಜಿಟಲ್ ಹಗರಣ :

# ನಾಲ್ವರು ಚೀನಿಯಾರು ಸೇರಿ 58 ಸಂಸ್ಥೆಗಳ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ ಡಿ 14 – ಶೆಲ್ ಸಂಸ್ಥೆಗಳು ಮತ್ತು ಡಿಜಿಟಲ್ ಹಗರಣಗಳ ವ್ಯಾಪಕ ಜಾಲದ ಮೂಲಕ 1,000 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ವಂಚಿಸಿದ ಅಂತರರಾಷ್ಟ್ರೀಯ ಸೈಬರ್ ವಂಚನೆ ಜಾಲದಲ್ಲಿ ನಾಲ್ವರು ಚೀನೀ ಪ್ರಜೆಗಳು ಸೇರಿದಂತೆ 17 ಜನರು ಮತ್ತು 58 ಕಂಪನಿಗಳ ವಿರುದ್ಧ ಸಿಬಿಐ ಆರೋಪಪಟ್ಟಿ ಸಲ್ಲಿಸಿದೆ.




ಕಳೆದ ಅಕ್ಟೋಬರ್‌ನಲ್ಲಿ ಈ ಜಾಲವನ್ನು ಭೇದಿಸಿದ ನಂತರ, ತನಿಖಾಧಿಕಾರಿಗಳು ವಿವಿಧ ವಂಚನೆಗಳನ್ನು ನಡೆಸಲು ವಿಸ್ತಾರವಾದ ಡಿಜಿಟಲ್ ಮತ್ತು ಹಣಕಾಸು ಮೂಲಸೌಕರ್ಯವನ್ನು ಅವಲಂಬಿಸಿದ್ದ ಸಂಘಟಿತ ಸಿಂಡಿಕೇಟ್ ಅನ್ನು ಸಿಬಿಐ ಅಧಿಕಾರಿಗಳು ಬಯಲು ಮಾಡಿದ್ದಾರೆ.

ಇವುಗಳಲ್ಲಿ ದಾರಿತಪ್ಪಿಸುವ ಸಾಲ ಅರ್ಜಿಗಳು, ನಕಲಿ ಹೂಡಿಕೆ ಯೋಜನೆಗಳು, ಪೊಂಜಿ ಮತ್ತು ಬಹು-ಹಂತದ ಮಾರ್ಕೆಟಿಂಗ್ ಮಾದರಿಗಳು, ನಕಲಿ ಅರೆಕಾಲಿಕ ಉದ್ಯೋಗ ಕೊಡುಗೆಗಳು ಮತ್ತು ಮೋಸದ ಆನ್‌ಲೈನ್ ಗೇಮಿಂಗ್ ಪ್ಲಾಟ್‌ಫಾರ್ಮ್‌ಗಳು ಸೇರಿವೆ.

ತನಿಖಾ ಸಂಸ್ಥೆಯ ಅಂತಿಮ ವರದಿಯ ಪ್ರಕಾರ, ಗುಂಪು 111 ಶೆಲ್ ಕಂಪನಿಗಳ ಮೂಲಕ ಅಕ್ರಮ ನಿಧಿಯ ಹರಿವನ್ನು ಪದರ ಪದರವಾಗಿ ಮಾಡಿ, ಮ್ಯೂಲ್ ಖಾತೆಗಳ ಮೂಲಕ ಸುಮಾರು 1,000 ಕೋಟಿ ರೂ.ಗಳನ್ನು ರವಾನಿಸಿತು. ಒಂದು ಖಾತೆಯು ಅಲ್ಪಾವಧಿಯಲ್ಲಿ 152 ಕೋಟಿ ರೂ.ಗಳಿಗಿಂತ ಹೆಚ್ಚು ಹಣವನ್ನು ಪಡೆದುಕೊಂಡಿದೆ.ನಕಲಿ ನಿರ್ದೇಶಕರು, ನಕಲಿ ಅಥವಾ ದಾರಿತಪ್ಪಿಸುವ ದಾಖಲೆಗಳು, ನಕಲಿ ವಿಳಾಸಗಳು ಮತ್ತು ವ್ಯವಹಾರ ಉದ್ದೇಶಗಳ ಸುಳ್ಳು ಹೇಳಿಕೆಗಳನ್ನು ಬಳಸಿಕೊಂಡು ನಕಲಿ ಕಂಪನಿಗಳನ್ನು ಸಂಯೋಜಿಸಲಾಗಿದೆ ಎಂದು ಸಿಬಿಐ ತಿಳಿಸಿದೆ.

ಈ ನಕಲಿ ಸಂಸ್ಥೆಗಳನ್ನು ವಿವಿಧ ಪಾವತಿ ಗೇಟ್‌ವೇಗಳೊಂದಿಗೆ ಬ್ಯಾಂಕ್ ಖಾತೆಗಳು ಮತ್ತು ವ್ಯಾಪಾರಿ ಖಾತೆಗಳನ್ನು ತೆರೆಯಲು ಬಳಸಲಾಗುತ್ತಿತ್ತು, ಇದು ಅಪರಾಧದ ಆದಾಯವನ್ನು ತ್ವರಿತವಾಗಿ ಪದರ ಪದರವಾಗಿ ಮತ್ತು ಬೇರೆಡೆಗೆ ತಿರುಗಿಸಲು ಅನುವು ಮಾಡಿಕೊಡುತ್ತದೆ ಎಂದು ಸಿಬಿಐ ವಕ್ತಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದೇಶವು ಕೋವಿಡ್-19 ಸಾಂಕ್ರಾಮಿಕ ರೋಗದೊಂದಿಗೆ ಹೋರಾಡುತ್ತಿದ್ದ 2020 ರಲ್ಲಿ ಹಗರಣದ ಮೂಲವನ್ನು ತನಿಖಾಧಿಕಾರಿಗಳು ಪತ್ತೆಹಚ್ಚಿದ್ದಾರೆ. ನಾಲ್ಕು ಚೀನೀ ಹ್ಯಾಂಡ್ಲರ್‌ಗಳಾದ ಝೌ ಯಿ, ಹುವಾನ್ ಲಿಯು, ವೀಜಿಯಾನ್ ಲಿಯು ಮತ್ತು ಗುವಾನ್‌ಹುವಾ ವಾಂಗ್ ಅವರ ನಿರ್ದೇಶನದ ಮೇರೆಗೆ ನಕಲಿ ಕಂಪನಿಗಳನ್ನು ಸೇರಿಸಿಕೊಳ್ಳಲಾಗಿದೆ ಎಂದು ಹೇಳಲಾಗಿದೆ.

ಅವರ ಭಾರತೀಯ ಸಹಚರರು ಅನುಮಾನಾಸ್ಪದ ವ್ಯಕ್ತಿಗಳಿಂದ ಗುರುತಿನ ದಾಖಲೆಗಳನ್ನು ಪಡೆದರು, ನಂತರ ಅವುಗಳನ್ನು ವಂಚನೆಗಳಿಂದ ಬಂದ ಹಣವನ್ನು ಅಕ್ರಮವಾಗಿ ವರ್ಗಾಯಿಸಲು ಮತ್ತು ಹಣದ ಹಾದಿಯನ್ನು ಮರೆಮಾಚಲು ಶೆಲ್ ಕಂಪನಿಗಳು ಮತ್ತು ಮ್ಯೂಲ್ ಖಾತೆಗಳ ಜಾಲವನ್ನು ಸ್ಥಾಪಿಸಲು ಬಳಸಲಾಯಿತು.

ತನಿಖೆಯು ಸಂವಹನ ಸಂಪರ್ಕಗಳು ಮತ್ತು ಕಾರ್ಯಾಚರಣೆಯ ನಿಯಂತ್ರಣವನ್ನು ಬಹಿರಂಗಪಡಿಸಿತು, ಇದು ವಿದೇಶದಿಂದ ವಂಚನೆ ಜಾಲವನ್ನು ನಡೆಸುತ್ತಿರುವ ಚೀನೀ ಮಾಸ್ಟರ್‌ಮೈಂಡ್‌ಗಳ ಪಾತ್ರವನ್ನು ಗುರುತಿಸಿದೆ ಎಂದು ಸಂಸ್ಥೆ ಹೇಳಿದೆ.ಗಮನಾರ್ಹವಾಗಿ, ಇಬ್ಬರು ಭಾರತೀಯ ಆರೋಪಿಗಳ ಬ್ಯಾಂಕ್ ಖಾತೆಗಳಿಗೆ ಲಿಂಕ್ ಮಾಡಲಾದ ಯುಪಿಐ ಐಡಿ ಆಗಸ್ಟ್ 2025 ರ ಹೊತ್ತಿಗೆ ವಿದೇಶಿ ಸ್ಥಳದಲ್ಲಿ ಸಕ್ರಿಯವಾಗಿರುವುದು ಕಂಡುಬಂದಿದೆ, ಇದು ಭಾರತದ ಹೊರಗಿನಿಂದ ವಂಚನೆ ಮೂಲಸೌಕರ್ಯದ ನಿರಂತರ ವಿದೇಶಿ ನಿಯಂತ್ರಣ ಮತ್ತು ನೈಜ-ಸಮಯದ ಕಾರ್ಯಾಚರಣೆಯ ಮೇಲ್ವಿಚಾರಣೆಯನ್ನು ನಿರ್ಣಾಯಕವಾಗಿ ಸ್ಥಾಪಿಸಿತು ಎಂದು ಸಿಬಿಐ ಹೇಳಿಕೆ ತಿಳಿಸಿದೆ.

ದರೋಡೆಕೋರರು ಗೂಗಲ್ ಜಾಹೀರಾತುಗಳು, ಬೃಹತ್ ಅಭಿಯಾನಗಳು, ಸಿಮ್-ಬಾಕ್ಸ್ ಆಧಾರಿತ ಸಂದೇಶ ವ್ಯವಸ್ಥೆಗಳು, ಕ್ಲೌಡ್ ಮೂಲಸೌಕರ್ಯ, ಫಿನ್‌ಟೆಕ್ ಪ್ಲಾಟ್‌ಫಾರ್ಮ್‌ಗಳು ಮತ್ತು ಬಹು ಮ್ಯೂಲ್ ಬ್ಯಾಂಕ್ ಖಾತೆಗಳನ್ನು ಬಳಸಿಕೊಂಡು ಹೆಚ್ಚು ಪದರಗಳ, ತಂತ್ರಜ್ಞಾನ-ಚಾಲಿತ ಕಾರ್ಯಾಚರಣೆಯನ್ನು ಬಳಸಿಕೊಂಡಿದ್ದಾರೆ ಎಂದು ತನಿಖೆಯಲ್ಲಿ ಕಂಡುಬಂದಿದೆ.

ಕಾರ್ಯಾಚರಣೆಯ ಪ್ರತಿಯೊಂದು ಹಂತ – ಬಲಿಪಶುಗಳನ್ನು ಆಕರ್ಷಿಸುವುದರಿಂದ ಹಿಡಿದು ನಿಧಿಗಳ ಸಂಗ್ರಹಣೆ ಮತ್ತು ಚಲನೆಯವರೆಗೆ – ನಿಜವಾದ ನಿಯಂತ್ರಕರ ಗುರುತನ್ನು ಮರೆಮಾಚಲು ಮತ್ತು ಕಾನೂನು ಜಾರಿ ಸಂಸ್ಥೆಗಳಿಂದ ಪತ್ತೆಹಚ್ಚುವುದನ್ನು ತಪ್ಪಿಸಲು ಉದ್ದೇಶಪೂರ್ವಕವಾಗಿ ರಚಿಸಲಾಗಿದೆ ಎಂದು ವಕ್ತಾರರು ಹೇಳಿದರು.ನಾಲ್ವರು ಚೀನೀ ಪ್ರಜೆಗಳು ಸೇರಿದಂತೆ 17 ವ್ಯಕ್ತಿಗಳು ಮತ್ತು 58 ಕಂಪನಿಗಳನ್ನು ಆರೋಪಪಟ್ಟಿಯಲ್ಲಿ ಹೆಸರಿಸಲಾಗಿದೆ.

ಆನ್‌ಲೈನ್ ಹೂಡಿಕೆ ಮತ್ತು ಉದ್ಯೋಗ ಯೋಜನೆಗಳ ಮೂಲಕ ನಾಗರಿಕರಿಗೆ ದೊಡ್ಡ ಪ್ರಮಾಣದ ವಂಚನೆಯನ್ನು ಗುರುತಿಸಿದ ಗೃಹ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿರುವ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರ (4)ಸಿ ಒಳಹರಿವಿನ ಮೇಲೆ ತನಿಖೆಯನ್ನು ಪ್ರಾರಂಭಿಸಲಾಯಿತು, ಇದರ ಪರಿಣಾಮವಾಗಿ ಅಕ್ಟೋಬರ್‌ನಲ್ಲಿ ಮೂವರು ವ್ಯಕ್ತಿಗಳನ್ನು ಬಂಧಿಸಲಾಯಿತು.ಆರಂಭದಲ್ಲಿ ಪ್ರತ್ಯೇಕ ದೂರುಗಳಾಗಿ ಕಂಡುಬಂದರೂ, ಸಿಬಿಐ ನಡೆಸಿದ ವಿವರವಾದ ವಿಶ್ಲೇಷಣೆಯು ಬಳಸಿದ ಅರ್ಜಿಗಳು, ನಿಧಿ-ಹರಿವಿನ ಮಾದರಿಗಳು, ಪಾವತಿ ಗೇಟ್‌ವೇಗಳು ಮತ್ತು ಡಿಜಿಟಲ್ ಹೆಜ್ಜೆಗುರುತುಗಳಲ್ಲಿ ಗಮನಾರ್ಹ ಹೋಲಿಕೆಗಳನ್ನು ಬಹಿರಂಗಪಡಿಸಿತು, ಇದು ಸಾಮಾನ್ಯ ಸಂಘಟಿತ ಪಿತೂರಿಯ ಕಡೆಗೆ ಬೊಟ್ಟು ಮಾಡಿತು ಎಂದು ಸಂಸ್ಥೆ ಹೇಳಿದೆ.

ಅಕ್ಟೋಬರ್ ಬಂಧನಗಳ ನಂತರ, ಸಿಬಿಐ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಜಾರ್ಖಂಡ್ ಮತ್ತು ಹರಿಯಾಣದಾದ್ಯಂತ 27 ಸ್ಥಳಗಳಲ್ಲಿ ಶೋಧ ನಡೆಸಿ, ಡಿಜಿಟಲ್ ಸಾಧನಗಳು, ದಾಖಲೆಗಳು ಮತ್ತು ಹಣಕಾಸು ದಾಖಲೆಗಳನ್ನು ವಶಪಡಿಸಿಕೊಂಡಿತು, ನಂತರ ಅವುಗಳನ್ನು ವಿವರವಾದ ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲಾಗಿದೆ.

# ವಿವಾಹ ಸಂಸ್ಥೆ ದುರ್ಬಲಗೊಂಡಿದೆಯೇ ಅಥವಾ ಹಳೆಯದಾಗಿದೆಯೇ?

ಆಧುನಿಕತೆ ನುಸುಳದೇ ಇದ್ದ ಕಾಲದಲ್ಲಿಯೇ ಕೆಳವರ್ಗದವರಲ್ಲಿ ಸೀರುಡಿಕೆ, ಕೂಡಿಕೆ, ಕೂಡಾವಳಿ, ಉಡಕಿ ಮೂಲಕ ವಿಧವಾ ವಿವಾಹಕ್ಕೆ ಅವಕಾಶವಿತ್ತು. ಆದರೆ ಮೇಲ್ವರ್ಗದ ಮಹಿಳೆಯರಿಗೆ ಈ ಅವಕಾಶವೂ ಇದ್ದಿಲ್ಲ. ವಿವಾಹ, ಕುಟುಂಬಗಳೆಂಬ ಸಾಮಾಜಿಕ ಸಂಸ್ಥೆಗಳನ್ನು ಪುರುಷಪ್ರಧಾನ ಪಾಳೇಗಾರಿ ಮೌಲ್ಯಗಳೇ ಹುಟ್ಟುಹಾಕಿವೆ. ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ವಿವಾಹ ಸಂಸ್ಥೆಯನ್ನು ಬಲವಾಗಿ ಬಳಸಿಕೊಳ್ಳಲಾಗಿದೆ ಎನ್ನುತ್ತಾರೆ ಚಿಂತಕರು.

ಡಿಸೆಂಬರ್ 1, 2025 ರಂದು ಖ್ಯಾತ ಅಭಿನೇತ್ರಿ, ಸಂಸದೆ ಜಯಾಬಚ್ಚನ್ ಮುಂಬೈಯಲ್ಲಿ ಬರ್ಖಾ ದತ್ತ ನಡೆಸಿಕೊಟ್ಟ "ವೀ ದ ವುಮನ್ ಏಷ್ಯಾ" ಕಾರ್ಯಕ್ರಮದಲ್ಲಿ ವಿವಾಹದ ಬಗ್ಗೆ ನೀಡಿದ ಹೇಳಿಕೆಯು ಸೋಷಿಯಲ್ ಮೀಡಿಯಾಗಳಲ್ಲಿ ಭಾರೀ ಚರ್ಚೆಗೆ ಒಳಗಾಗಿದೆ. ಬರ್ಖಾ ಕೇಳುತ್ತಿದ್ದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಜಯಾ ತಮ್ಮ ಮೊಮ್ಮಗಳು ನವ್ಯಾಗೆ ಈಗ 28 ವರ್ಷ. ಆದರೆ ನವ್ಯಾ ಮದುವೆಯಾಗುವುದು ನನಗೆ ಇಷ್ಟವಿಲ್ಲ" ಎನ್ನುತ್ತಾರೆ. ಮುಂದುವರಿದು ವಿವಾಹ ಮಹತ್ವದ ಕುರಿತು ಪ್ರಶ್ನೆ ಕೇಳಿದಾಗ "ಜಸ್ಟ್ ಎಂಜಾಯ್ ಯುವರ್ ಲೈಫ್" ಎಂದು ಹೇಳುತ್ತಾರೆ. ಈ ಮಾತು ಸಾಕಷ್ಟು ಬಿರುಗಾಳಿಯನ್ನೇ ಎಬ್ಬಿಸಿದೆ.

ಪ್ರೇಕ್ಷಕರಲ್ಲಿ ಒಬ್ಬ ಯುವತಿ– ಇಂದಿನ ಹೊಸ ತಾಯಂದಿರಿಗೆ ನೀವು ಏನು ಹೇಳಬಯಸುತ್ತೀರಿ ಎಂದು ಕೇಳಿದ ಪ್ರಶ್ನೆಗೆ "ಈಗಿನ ಹುಡುಗ–ಹುಡುಗಿಯರು ಅವರ ಅಜ್ಜ–ಅಜ್ಜಿಗಿಂತ ಹೆಚ್ಚು ಜಾಣರಾಗಿರುತ್ತಾರೆ ಎಂದು ಹೇಳಿದ್ದಾರೆ. ಮಕ್ಕಳನ್ನು ಹೇಗೆ ಬೆಳೆಸಬೇಕೆನ್ನುವ ಸಲಹೆಯನ್ನು ನಾವು ಅವರಿಗೆ ನೀಡಲು ಸಾಧ್ಯ ಇಲ್ಲ ಯಾಕೆಂದರೆ ನಾವು ಹಳೆಯ ಕಾಲದವರು" ಎನ್ನುತ್ತಾರೆ. ಈ ಮಾತನ್ನು ವೈಯಕ್ತಿಕವಾಗಿ ನಾನೂ ಒಪ್ಪುತ್ತೇನೆ. ಈಗ ಯಾರಿಗೂ ಯಾರ ಸಲಹೆ ಬೇಕಿಲ್ಲ. ಎಲ್ಲರೂ ಎಲ್ಲಾ ಬಲ್ಲವರೇ, ಹಿಂದಿನವರಿಗಿಂತ ತಾವು ಹೆಚ್ಚು ತಿಳಿದಿದ್ದೇವೆ ಎನ್ನುವವರೇ. ತಂದೆ ತಾಯಿ ಅಜ್ಜ ಅಜ್ಜಿಯರು ಬೇಬಿ ಸಿಟ್ಟಿಂಗ್‌ಗಷ್ಟೇ ಸೀಮಿತರು.

ವಿವಾಹ ಸಂಸ್ಥೆ ಮಾನವ ಸಮಾಜದ ಮೂಲಭೂತ ಅಡಿಪಾಯವಾಗಿದೆ. ಇದು ಇಬ್ಬರು ವ್ಯಕ್ತಿಗಳ ನಡುವಿನ ದೈಹಿಕ, ಭಾವನಾತ್ಮಕ ಹಾಗೂ ಸಾಮಾಜಿಕ ಸಂಬಂಧವನ್ನು ಕಾನೂನುಬದ್ಧವಾಗಿ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಗುರುತಿಸುತ್ತದೆ ಎನ್ನುತ್ತಾರೆ. ಆದರೆ ಈಗ ಬಹುತೇಕ ಯುವವರ್ಗ ಮದುವೆಯೇ ಬೇಡ, ಮಕ್ಕಳೂ ಬೇಡ, ಮದುವೆಯೇ ಅಂತಿಮ ಎಂದೇಕೆ ಆಗಬೇಕು?" ಎಂದು ಪ್ರಶ್ನಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜಯಾ ಬಚ್ಚನ್ ಹೇಳಿದ ವಿಷಯಗಳು ಕೇವಲ ಅವರ ವೈಯಕ್ತಿಕ ಅಭಿಪ್ರಾಯವಾಗಿ ಉಳಿಯುವ ಬದಲು ವರ್ತಮಾನದಲ್ಲಿ ಆಧುನಿಕ ಸಮಾಜದಲ್ಲಿ ಸಂಬಂಧಗಳ ಮಹತ್ವ, ಮಹಿಳಾ ಸ್ವಾತಂತ್ರ್ಯ ಮತ್ತು ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವಂತಿದೆ. ಎಲ್ಲೋ ಒಂದು ಕಡೆ ತನ್ನ ಮೌಲಿಕ ಸ್ವರೂಪವನ್ನು ಕಳೆದುಕೊಳ್ಳುತ್ತಿರುವ ವಿವಾಹಸಂಸ್ಥೆಯನ್ನು ಕುರಿತೂ ಯುವವರ್ಗ ಹಾಗೂ ಮಹಿಳೆಯರಲ್ಲಿ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ. ಮೂವತ್ತರ ದಶಕದ ಆಚೆಯೀಚೆಗಿನ ನಮ್ಮ ತಾಯಂದಿರ ಕಾಲ, ಅರವತ್ತು ಎಪ್ಪತ್ತರ ದಶಕದಲ್ಲಿ ಹುಟ್ಟಿದ ನಮ್ಮ ಕಾಲ, ಈಗ ನಮ್ಮ ಮಕ್ಕಳ ಹಾಗೂ ಈಗಿನ ಮೊಮ್ಮಕ್ಕಳ ಕಾಲಘಟ್ಟದ ತಲೆಮಾರುಗಳಷ್ಟು ಅಂತರದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಕಾಲ ಬದಲಾದಂತೆ ಮನುಷ್ಯನ ಬದುಕಿನ ಸ್ತರ ಮತ್ತು ಮೌಲ್ಯಗಳೂ ನವ ಜಾಗತೀಕರಣದ ಕವಣೆ ಬೀಸಿನಿಂದ ತಪ್ಪಿಸಿಕೊಳ್ಳಲಾಗದೇ ಕಾಲಪ್ರವಾಹದೊಂದಿಗೆ ಕೊಚ್ಚಿಹೋಗುತ್ತಿದೆ ಮತ್ತು ಹೀಗೆ ಸಾಗುತ್ತಿರುವುದೇ ಜೀವನ ಎಂದು ವ್ಯಾಖ್ಯಾನಿಸಬಹುದೇನೋ.

ನಮ್ಮ ಪಂಜಾಬಿ ಸಂಬಂಧಿಕರ ಕುಟುಂಬಗಳಲ್ಲಿ ನಡೆದ ಹಾಗೂ ನಡೆಯುತ್ತಿರುವ ಘಟನೆಗಳನ್ನು ನೋಡಿದರೆ ಸಮಾಜವೂ ಆಧುನಿಕ ಕಾಲದ ಎಲ್ಲ ಬದಲಾವಣೆಗಳನ್ನು ಒಪ್ಪಿಕೊಳ್ಳುತ್ತಲೇ ತನ್ನನ್ನು ನವೀಕರಿಸಿಕೊಳ್ಳುತ್ತ ಚಲನಶೀಲವಾಗಿರುವುದನ್ನು ಕಾಣುತ್ತೇನೆ. ಕನಿಷ್ಠ ಒಂದು ಮೂರು ಕುಟುಂಬಗಳಲ್ಲಿ ಹೊಸದಾಗಿ ಮದುವೆಯಾದ ಮದುಮಗಳು ಒಂದಿಲ್ಲಾ ಒಂದು ಕಾರಣದಿಂದ ಬಾಳಲಾಗದೇ ಮನೆಬಿಟ್ಟು ಹೋಗಿರುವರು. ಮೊದಲ ನೋಟದಲ್ಲಿ ಪ್ರೀತಿಯಾಗಿ ಆ ಪ್ರೀತಿಯ ಆವೇಶ ಕಡಿಮೆಯಾದ ನಂತರ ಬದುಕಿನ ವಾಸ್ತವತೆ ಎದುರಾದಾಗ ಯುವತಿಯರು ಆ ಸಂಬಂಧವನ್ನು ತೊರೆದು ಬೇರೆಯಾದದ್ದನ್ನು ಕಂಡು ಮೊದ ಮೊದಲು ಇದೆಲ್ಲ ಇಷ್ಟು



ಸುಲಭವೇ? ಎಂದು ಅಚ್ಚರಿಪಟ್ಟಿದ್ದೆ.

ಪ್ರವಾಸದಲ್ಲಿ ಪರಿಚಿತವಾದ ಹಿಮಾಚಲದ ಯುವತಿ ಈ ಪಂಜಾಬಿ ಯುವಕನನ್ನು ಆರ್ಯ ಸಮಾಜದಲ್ಲಿ ಮದುವೆಯಾಗಿ ಇಲ್ಲಿ ಬಂದಳು. ಹುಡುಗನ ಮನೆಯವರು ಶ್ರೀಮಂತರಲ್ಲ. ಹುಡುಗನಿಗೆ ಸರಿಯಾದ ಕೆಲಸವೂ ಇದ್ದಿಲ್ಲ. ಆಕೆ ಓದಬೇಕೆಂದಳು, ಸಿವಿಲ್ ಸರ್ವಿಸ್ ಗೆ ಸಿದ್ಧತೆಮಾಡಬೇಕು ಎಂದಳು. ಹುಡುಗನ ಮನೆಯವರು ಸೊಸೆಯಿಂದಲಾದರೂ ಮಗನ ಬದುಕು ಹಸನಾದೀತೆಂದು ಕಷ್ಟಪಟ್ಟು ಓದಿಸತೊಡಗಿದರು. ಮನೆಯಲ್ಲಿ ಓದಲಾಗದು ಎಂದು ಮುಖರ್ಜಿ ನಗರದ ಕೋಚಿಂಗ್ ಸೆಂಟರಿನ ಹತ್ತಿರದ ಪಿಜೀ ಸೇರಿದಳು. ಆಗಲೇ ಮದುವೆಯ ಹುರುಪು ಕಳೆದು ಮದುವೆ ಬಂಧನವೆನಿಸತೊಡಗಿತು ಆಕೆಗೆ. ಬಹುಶಃ ಆಕೆ ಕಟ್ಟಿಕೊಂಡ ಕನಸಿನಂತಿರಲಿಲ್ಲ ಅವಳ ವಿವಾಹಿತ ಬದುಕು. ಒಂದಿನ ಮನೆ ತೊರೆದು ಹೋದಳು. ಆಕೆ ಕೊಟ್ಟ ಕಾರಣ "ಹುಡುಗನಿಗೆ ಒಳ್ಳೆಯ ಕೆಲಸವಿಲ್ಲ. ಹಣವಿಲ್ಲ. ಒಳ್ಳೆಯ ಮನೆಯಿಲ್ಲ. ನನಗಿಲ್ಲಿ ಯಾವ ಭವಿಷ್ಯವೂ ಕಾಣುತ್ತಿಲ್ಲ" ಎಂದು. ನಂತರ ಜನರೆಂದರು 'ಆಕೆಗೆ ಇನ್ನೊಬ್ಬನೊಂದಿಗೆ ಪ್ರೇಮವುಂಟಾಗಿತ್ತು. ಅದಕ್ಕೇ ಈ ನೆಪ, ಅವನೊಂದಿಗೆ ಹೋದಳು' ಎಂದು.

ಇನ್ನೊಂದು ಕುಟುಂಬದಲ್ಲೂ ಇಂತಹದ್ದೇ ಕತೆ. ಕಾರಣ ಬೇರೆ. ದೊಡ್ಡ ಶ್ರೀಮಂತ ಕುಟುಂಬ. ಮದುವೆಯಾಗಿ ಬಂದವಳಿಗೆ ತಾನು ಹಾಗಿರಬೇಕು, ಹೀಗಿರಬೇಕು ಎಂಬ ಕನಸುಗಳು. ಅತ್ತೆ ಅವಳಿಗೆ ಇಂತಹ ಕಿರಿದಾದ ಬಟ್ಟೆ ತೊಡಬೇಡ, ಎದುರುತ್ತರ ಕೊಡಬೇಡ, ಒಬ್ಬಳೇ ಹೊರಗಡೆ ಅತ್ತ ಇತ್ತ ಹೋಗಬೇಡ, ಹೀಗಿರು ಹಾಗಿರು ಎಂದು ಹೇಳುತ್ತಿದ್ದುದು ಕಿರಿಕಿರಿಯೆನಿಸಿ ಇಂತಹ ಕಿರಿಕಿರಿಯಲ್ಲಿ ತಾನಿರಲಾರೆ ಎಂದು ಮನೆ ತೊರೆದು ಹೋದಳು. ಇನ್ನೊಬ್ಬ ಯುವತಿಗೆ, "ಮನೆಯಲ್ಲಿ ಮನೆಗೆಲಸ ಮಾಡಿಸುತ್ತಾರೆ, ಕೆಲಸದವರನ್ನು ಇಟ್ಟಿಲ್ಲ, ತಾನೇನು ಮನೆಗೆಲಸದವಳೇ ಇವರ ಮನೆಯಲ್ಲಿ ಕೆಲಸಮಾಡಿಕೊಂಡಿರಲು?" ಎಂದು ಮನೆತೊರೆದು ಹೋದಳು.

ಇನ್ನೊಬ್ಬ ಯುವ ದಂಪತಿಗಳು ತಮ್ಮ ಹತ್ತು ವರ್ಷದ ಪ್ರೇಮದ ಕತೆಯನ್ನು, ಕಾಲೇಜಿನ ದಿನಗಳಲ್ಲಿ ಆ ಹುಡುಗಿಗಾಗಿ ಹುಡುಗ ಅನೇಕ ಪುಂಡರನ್ನು ಚಚ್ಚಿದ್ದು, ಇನ್ಯಾರನ್ನೋ ಮನೆಯಿಂದ ಹೊರದಬ್ಬಿದ್ದು ಇತ್ಯಾದಿ ರೋಚಕ ಕತೆಯನ್ನು ಹೇಳುತ್ತಿದ್ದವರೇ ಒಂದಿನ ಬೇರೆಯಾದರು. ಯಾರಿಗೂ ನಂಬಲಾಗಲಿಲ್ಲ. ಯಾವುದೊ ಒಂದು ವಿಷಯಕ್ಕೆ ಹುಡುಗ ಆಕೆಯ ಕೆನ್ನೆಗೆ ಹೊಡೆದನಂತೆ. ಅದೇ ಕಾರಣಕ್ಕೆ ಆಕೆ ಮನೆ ತೊರೆದು ಹೋದಳು ಪುನಃ ಇವರಿಬ್ಬರೂ ಒಂದಾಗಲೇ ಇಲ್ಲ. ಈ ಹುಡುಗ ನನ್ನ ಮಗನ ಸ್ಕೂಲ ಗೆಳೆಯ. ನಾನೂ ಒಂದನೇ ತರಗತಿಯಿಂದ ಅವರನ್ನು ಕಂಡವಳು. ಹತ್ತಿರದ ಎಳೆಯರ ಜೀವನದಲ್ಲಿ ಇಂತಹ ಘಟನೆ ನಡೆದಾಗ ಆಧುನಿಕತೆಯನ್ನು ಒಪ್ಪುತ್ತ ಪ್ರೇಮವನ್ನು ಎತ್ತರದಲ್ಲಿಟ್ಟು ನೋಡುವವಳಾದ ನಾನು ಸಣ್ಣ ಪುಟ್ಟ ಕಾರಣಕ್ಕೆ ಅವರ ಬಾಳು ಮೂರಾಬಟ್ಟೆ ಆಗಬಾರದಲ್ಲ ಎಂದು ಬುದ್ಧಿ ಹೇಳಲು ಪ್ರಯತ್ನಿಸಿದ್ದೆ. "ಆತ ಹೊಡೆದದ್ದು ತಪ್ಪು ಆದರೆ ಇನ್ನೊಂದು ಚಾನ್ಸ್ ಕೊಡಬೇಕಾದ್ದೂ ನಿನ್ನ ಕರ್ತವ್ಯ" ಎಂತೆಂತಹ ಅಪರಾಧಿಗಳಿಗೂ ಸುಧಾರಿಸುವ, ತಿದ್ದಿಕೊಳ್ಳುವ ಅವಕಾಶವನ್ನು ಕೊಡುತ್ತಾರಲ್ಲವೇ? ಕ್ಷಮಿಸಿಬಿಡು ಒಮ್ಮೆ" ಎಂದರೂ ಆಕೆ ಕೇಳಿಸಿಕೊಳ್ಳಲಿಲ್ಲ.

ಇಂತಹ ನೂರಾರು ಘಟನೆಗಳು ನಮ್ಮ ಸುತ್ತಮುತ್ತಲೂ ನಡೆಯುತ್ತಿವೆ. ಎಷ್ಟು ಸುಲಭವಾಗಿ ಈ ತಲೆಮಾರಿನವರು ನಿರ್ಧಾರ ತೆಗೆದುಕೊಳ್ಳುತ್ತಾರೆ. ನಮ್ಮ ಕಾಲದಲ್ಲಿ ಹೀಗೆ ಯೋಚಿಸಲೂ ಭಯವಾಗುತ್ತಿತ್ತು. ನಮ್ಮ ತಲೆಮಾರಿನ ಯೋಚನೆಗಳು, ಆದರ್ಶಗಳು, ಸಿದ್ಧಾಂತಗಳು ಇಂದಿನವರಿಗೆ ನಗೆಯ ವಿಷಯಗಳಾಗಬಹುದು. ವಿವಾಹ ಸಂಸ್ಥೆಯ ಚೌಕಟ್ಟಿನಲ್ಲಿಈ ಹೊತ್ತು ಬದುಕುತ್ತಿರುವವರೆಂದರೆ ನಮ್ಮ ಹಿಂದಿನ ಹಾಗೂ ನಮ್ಮ ಪೀಳಿಗೆಯಷ್ಟೇ ಎಂದು ಮುಂದೊಮ್ಮೆ ಹೇಳುವ ಪರಿಸ್ಥಿತಿ ಬರಬಹುದು. ಹಾಗಿದೆ ಇವತ್ತಿನ ಯುವ ಜನಾಂಗ. ಯಾರೂ ಮನೆಯ ಕೆಲಸ (ಅಡುಗೆ, ಇತ್ಯಾದಿ) ಮಾಡಲು ಇಷ್ಟಪಡುವುದಿಲ್ಲವಂತೆ. ಯಾಕೆಂದರೆ ಅವರಿಗೆ ಉದ್ಯೋಗದಲ್ಲಿನ ಒತ್ತಡ ಅಷ್ಟಿರುತ್ತದೆ. ಅದರ ಮೇಲೆ ಮನೆ ಕೆಲಸ ಮಾಡು, ಅಡುಗೆ ಮಾಡು" ಎನ್ನುವಷ್ಟು ಪುರಸೊತ್ತಾಗಲಿ, ತಾಳ್ಮೆಯಾಗಲಿ ಇರುವುದಿಲ್ಲವಂತೆ. ಹೊಂದಾಣಿಕೆಯನ್ನು ಮಾಡಿಕೊಳ್ಳುವಷ್ಟು ಮಾಡಿಕೊಳ್ಳುತ್ತೇವೆ ಇತರರ ಉಪದೇಶ ಬೇಕಿಲ್ಲ. ಅಷ್ಟಕ್ಕೂ ನಾವು ಗಳಿಸುವುದಾದರೂ ಯಾತಕ್ಕೆ. ನಮ್ಮ ಸುಖ ಸೌಕರ್ಯಗಳಿಗೆ ಒದಗದಿದ್ದರೆ ಇಷ್ಟು ಕಷ್ಟಪಡುವುದ್ಯಾಕೆ? ಇದು ಇಂದಿನವರ ತರ್ಕ.

ಇವೆಲ್ಲಾ ಘಟನೆಗಳು ಕಣ್ಣಮುಂದಿನ ಘಟನೆಗಳೇ. ತಲೆ ಮೇಲೆ ಸುತ್ತಿಗೆಯಿಂದ ಕುಟ್ಟಿದಂತೆ ಒಮ್ಮೆಗೆ ಎದುರಾದ ಬದಲಾವಣೆ, ಹಠಾತ್ತಾಗಿ ಮಕ್ಕಳ ಬದುಕಿನಲ್ಲಿ ಎರಗಿ ಬಂದ ಆಘಾತಗಳನ್ನು ಆಯಾ ಕುಟುಂಬಗಳು ಹೇಗೆ ಎದುರಿಸಿರಬಹುದು ಎಂಬ ಯೋಚನೆ ಕಾಡುತ್ತದೆ. ಇದಕ್ಕೆ ಹೊರತಾಗಿ ಹೊಂದಾಣಿಕೆಯಾಗದ ದಂಪತಿಗಳು ವಿಚ್ಛೇದನ ಪಡೆದುಕೊಂಡೋ ಪಡೆದುಕೊಳ್ಳದೆಯೋ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸುತ್ತ ಮಕ್ಕಳನ್ನು ನೋಡಿಕೊಳ್ಳುತ್ತ ಬದುಕುವವರೂ ಇದ್ದಾರೆ. ವಿಷಮ ದಾಂಪತ್ಯದಲ್ಲಿದ್ದು ಏನೂ ಮಾಡಲಾಗದವರು ಹಲ್ಲುಮುಡಿ ಕಚ್ಚಿಕೊಂಡು ಇದ್ದಷ್ಟು ದಿನ ಬದುಕುವುದೇ ತಮ್ಮ ಕರ್ಮ ಎಂದು ತಮಗೇ ಸಮಾಧಾನ ಹೇಳಿಕೊಂಡು ಬದುಕುತ್ತಿರುವವರೂ ಉಂಟು.

ಖ್ಯಾತ ಲೇಖಕ, ಅಂಕಣಕಾರ ಕುಶ್ವಂತ್ ಸಿಂಗ್ ಅವರ ಬದುಕಿನ ಬಗ್ಗೆ ಎಲ್ಲೋ ಓದಿದ್ದೇನೆ. ಅವರ ಪತ್ನಿಯೊಂದಿಗಿನ ಅವರ ಸಂಬಂಧ ಅಷ್ಟೊಂದು ಮಧುರವಾಗಿರಲಿಲ್ಲವಂತೆ. ಆದರೂ ಅವರಿಬ್ಬರೂ ಒಂದೇ ಸೂರಿನಡಿ ಅವರವರ ಸ್ವಾತಂತ್ರ್ಯವನ್ನು , ಅಸ್ತಿತ್ವವನ್ನು ಗೌರವಿಸುತ್ತ ಘನತೆಯಿಂದ ಬಾಳಿದ್ದರು. ಇನ್ನು ಅಮೃತಾ ಪ್ರೀತಮ್ ಬಗ್ಗೆ ಯಾರಿಗೆ ಗೊತ್ತಿಲ್ಲ? ಪತಿ ಪ್ರೀತಮ್ ಸಿಂಗ್ ಅವರಿಂದ ದೂರಾದರೂ ಕೊನೆಗಾಲದಲ್ಲಿ ಅವರು ಅನಾರೋಗ್ಯದಲ್ಲಿ ಇರುವಾಗ ಪ್ರೀತಮ್ ಅವರನ್ನು ತನ್ನ ಮನೆಗೆ ಕರೆತಂದು ಅಮೃತಾ ಇಮರೋಜ್ ಇಬ್ಬರೂ ಅವರನ್ನು ನೋಡಿಕೊಳ್ಳುತ್ತಾರೆ. ಆಕೆ ಇಮರೋಜ್ ಜೊತೆಗೆ ಒಟ್ಟಿಗೆ ಬದುಕುತ್ತಿದ್ದಾಗ್ಯೂ ಪತಿ ಪ್ರೀತಮ್ ಸಿಂಗ್ ಯಾವ ರೀತಿಯಿಂದಲೂ ಆಕೆಯನ್ನು ಹೀಯಾಳಿಸದೇ, ಅವಮಾನಿಸದೇ ಘನತೆಯಿಂದ ನಡೆದುಕೊಂಡಿದ್ದಾರೆ. ಇಂತಹ ದೇವತೆಯಂತಹ ಮನುಷ್ಯರೂ ಈ ಭೂಮಿಯಲ್ಲಿ ಆಗಿಹೋಗಿದ್ದಾರೆ ಎಂಬುದಷ್ಟೇ ಸತ್ಯ. ಅಲೆಮಾರಿಯೊಬ್ಬಳ ಆತ್ಮವೃತ್ತಾಂತ (ಖಾನಾಬದೋಶ್) ದ ಡಾ. ಅಜೀತ್ ಕೌರ್ ಅವರ ಬದುಕೂ ನಮ್ಮ ಕಣ್ಣಲ್ಲಿ ನೀರು ತರಿಸುತ್ತದೆ. ಗಂಡನ ದೌರ್ಜನ್ಯ, ಪ್ರೇಮಿಯ ವಂಚನೆ ಹೀಗೆ ಬದುಕಿನುದ್ದಕ್ಕೂ ಬರೀ ಕಷ್ಟವನ್ನೇ ಉಂಡ ಅಜೀತ್ ಕೌರ್ ಕೂಡ ಆತ್ಮಸ್ಥೈರ್ಯವುಳ್ಳ ಅತ್ಯಂತ ಗಟ್ಟಿ ಮಹಿಳೆ. ತಮ್ಮ ಇಬ್ಬರು ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ದಾರುಣವಾದ ಬೆಂಕಿ ಅಪಘಾತದಲ್ಲಿ ಕಳೆದುಕೊಂಡು, ಉಳಿದ ಒಬ್ಬ ಮಗಳೊಂದಿಗೆ ಒಬ್ಬರೇ ಬದುಕು ಕಟ್ಟಿಕೊಂಡರು. ಈಗ ನನ್ನಷ್ಟೇ ವಯಸ್ಸಿನ ಅವರ ಮಗಳು ಮದುವೆಯಾಗದೇ ತಾಯಿಯೊಂದಿಗೆ ತಮ್ಮ ಕಲೆ ಬರವಣಿಗೆಯಲ್ಲಿ ಸಂತೃಪ್ತವಾದ ಬದುಕನ್ನು ಬಾಳುತ್ತಿರುವರು.

ಈ ಎಲ್ಲಾ ಸಾಮಾಜಿಕ ಸನ್ನಿವೇಶದ ಹಿನ್ನೆಲೆಯಲ್ಲಿ ನಿಂತು ನೋಡಿದಾಗ ಜಯಾ ಬಚ್ಚನ್ ಹೇಳಿದ್ದರಲ್ಲಿ ಯಾವ ತಪ್ಪೂ ಇಲ್ಲ. ಮೊಮ್ಮಕ್ಕಳು ಮದುವೆಯಾಗುವುದನ್ನು ತಮ್ಮ ಬದುಕು ಕಟ್ಟಿಕೊಳ್ಳುವುದನ್ನು ಯಾವ ತಾಯಿ ಅಜ್ಜಿ ಬಯಸುವುದಿಲ್ಲ? ಒಂದುವೇಳೆ ಅವರು ಹಾಗೆ ಹೇಳಿದ್ದರೆ ಅವನ ಜೀವನಾನುಭವದ ಮಾತುಗಳಿರಬಹುದು. ಎಲ್ಲರಿಗೂ ಅವರವರ ಅನುಭವಗಳ ಭಂಡಾರವೇ ಇರುತ್ತದೆ. ಒಂದೆಡೆ ಜಯಾ ಬಚ್ಚನ್ ಹೇಳುತ್ತಾರೆ ಶ್ವೇತಾಳ ಮದುವೆಯಾದಾಗ ಆಕೆ ಬಹಳ ದುಃಖಿಸಿದ್ದರೆಂದು. ತಾಯಿಗೆ ಹೆಣ್ಣುಮಕ್ಕಳೊಂದಿಗೆ ಇರುವ ಭಾವನಾತ್ಮಕ, ಅಂತಃಕರಣದ ಸಂಬಂಧ ಬಹುಶಃ ಗಂಡುಮಕ್ಕಳೊಂದಿಗೆ ಅವರು ಬೆಳೆದಂತೆ ಸಾಧ್ಯವಾಗುವುದಿಲ್ಲವೇನೋ. ಅಮ್ಮ ಅಮ್ಮ' ಎಂದು ಹಿಂದಿಂದೆ ಸುತ್ತುವ ಮಗ ಕಿಶೋರಾವಸ್ಥೆಗೆ ಬರುವಾಗ ಅಪರಿಚಿತನಂತೆ ದೂರವಾಗತೊಡಗುತ್ತಾನೆ. ಜಯಾ ಬಚ್ಚನ್ ಅವರಿಗೂ ಏಕಾಂಗಿತನ ಕಾಡಿರಬಹುದು. ಶ್ವೇತಾ ನಂದಾ ಪತಿಯನ್ನು ತೊರೆದು ತಾಯಿಯ ಮನೆಯಲ್ಲಿಯೇ ಸುಮಾರು ವರ್ಷಗಳಿಂದ ಇದ್ದಾರೆ. ಇದೆಲ್ಲಾ ಅನುಭವಗಳು, ಎಲ್ಲವನ್ನೂ ಹೇಳಲಾಗದ ಸಂಕಟಗಳು, ಕಟು ವಾಸ್ತವಗಳು ಅವರನ್ನು ಗಡುಸಾಗಿಸಿವೆ ಎನಿಸುತ್ತದೆ. ಕಬ್ಬಿಣವನ್ನು ಬೆಂಕಿಯಲ್ಲಿ ಕಾಸಿ ಬಡಿದು ಬಡಿದು ಒಂದು ಆಕಾರಕ್ಕೆ ತರುವ ಲೋಹಾರನಂತೆ ಮನಸ್ಸು ಬುದ್ಧಿಯ ಮೇಲೆ ಆದ ಆಘಾತಗಳು ಮನುಷ್ಯನನ್ನು ಕಠಿಣವಾಗಿಸುತ್ತವೆಯೋ ಏನೋ. ಆಕೆಯ ಕೆಲ ಮಾತುಗಳು ಅತ್ಯಂತ ಕಟುವಾಗಿದ್ದವು. ಕೆಲವು ಒಪ್ಪುವಂತಿದ್ದವು. ಆಕೆಯೇ ಹೇಳುವಂತೆ ನನ್ನ ಅನುಭವ ತುಂಬಾ ಬದಲಾಗಿವೆ ಮತ್ತು ಇಂದು ಚಿಕ್ಕ ಮಕ್ಕಳು ತುಂಬಾ ಬುದ್ಧಿವಂತರು, ಅವರು ನಿಮ್ಮನ್ನು ಮೀರಿಸುತ್ತಾರೆ." ಮದುವೆಯ ಕಾನೂನುಬದ್ಧತೆಯು ಸಂಬಂಧವನ್ನು ವ್ಯಾಖ್ಯಾನಿಸಬೇಕಾಗಿಲ್ಲ ಎಂದು ಅವರು ಹೇಳುತ್ತಾರೆ.

ಅವರ ಹೇಳಿಕೆಯನ್ನು ಪ್ರಗತಿಪರರು ಪ್ರಶಂಸಿಸುತ್ತಿದ್ದರೆ ಮೂಲಭೂತವಾದಿಗಳು ಕೆಂಗಣ್ಣಾಗಿದ್ದಾರೆ. ಯುವತಿಯರು ಮತ್ತು ಫೆಮಿನಿಸ್ಟ್‌ಗಳು ಇದನ್ನು "ಮಹಿಳಾ ಸ್ವಾತಂತ್ರ್ಯದ ಸಲಹೆ" ಎಂದು ಸ್ವಾಗತಿಸಿದ್ದಾರೆ. ಈಗಾಗಲೇ ಮದುವೆಯೇ ಬೇಡ ಎನ್ನುತ್ತಿರುವವರ ಸಂಖ್ಯೆ ತುಂಬಾ ದೊಡ್ಡದಿದೆ. ಯುವ ಜನಾಂಗ ಅದರಲ್ಲೂ ಕಾಲೇಜು ವಿದ್ಯಾರ್ಥಿನಿಯರಿಂದ ಬಂದಿರುವ ಪ್ರತಿಕ್ರಿಯೆಗಳಲ್ಲಿ, "ಇದು ಸಮಾಜದ ಒತ್ತಡಗಳಿಂದ ಮುಕ್ತರಾಗಲು ಪ್ರೇರಣೆ" ಎಂದು ಹೇಳಲಾಗಿದೆ. ಇದು ಲೈವ್–ಇನ್ ಸಂಬಂಧಗಳನ್ನು ಮತ್ತು ವೈಯಕ್ತಿಕ ಆಯ್ಕೆಯನ್ನು ಎತ್ತಿಹಿಡಿಯುತ್ತದೆ ಎಂದು ಕೆಲವರು ಸ್ವೀಕರಿಸಿದ್ದಾರೆ.

ಹಾಗೆ ನೋಡಿದರೆ ಜಾಗತಿಕ ಉದಾರೀಕರಣದಲ್ಲಿ ಲಕ್ಷಾಂತರ ಬಹುರಾಷ್ಟ್ರೀಯ ಕಾರ್ಪೋರೇಟ್ ಉದ್ಯಮ ಹಾಗೂ ಉದ್ಯೋಗಾವಕಾಶಗಳು ಮಹಿಳೆಯರಿಗೆ ಆರ್ಥಿಕ ಭದ್ರತೆ ಒದಗಿಸಿದರೂ ಮಹಿಳಾ ವಿಮೋಚನೆ, ಸಬಲೀಕರಣದಲ್ಲಿ ಇದುವರೆಗೂ ಯಾವ ಪವಾಡವೂ ಅಗಲಿಲ್ಲ. ಪರಸ್ಪರ ಪ್ರೀತಿಸಿ ಮದುವೆಯಾದವರಲ್ಲೂ ಹೊಂದಾಣಿಕೆ ಸಾಮರಸ್ಯದ ಕೊರತೆಯಿಂದ ಬದುಕು ನರಕವಾಗಿರುವುದನ್ನು ಕಾಣುತ್ತೇವೆ. ಪ್ರೇಮರಹಿತ ಮದುವೆಯಲ್ಲಿ ನರಳುವುದಕ್ಕಿಂತ ಕಳಚಿಕೊಳ್ಳುವುದೇ ಲೇಸು. ಆದರೆ ಆ ಧೈರ್ಯದ ಹೆಜ್ಜೆಗೂ ಪುರುಷ ವ್ಯವಸ್ಥೆ ಸರಪಳಿ ಹಾಕಿಡುತ್ತದೆ. ಆಕೆ ಬದುಕಿರುವವರೆಗೂ ಅವನ ಆಸ್ತಿ ಆಗಿ ಬಿದ್ದಿರಬೇಕಷ್ಟೆ.

ವೈಧವ್ಯವೆಂಬುದು ಮಹಿಳಾ ಶೋಷಣೆಯ ಅತ್ಯಂತ ಕ್ರೂರವಾದ ಘಟ್ಟ. ಆಧುನಿಕತೆ ನುಸುಳದೇ ಇದ್ದ ಕಾಲದಲ್ಲಿಯೇ ಕೆಳವರ್ಗದವರಲ್ಲಿ ಸೀರುಡಿಕೆ, ಕೂಡಿಕೆ, ಕೂಡಾವಳಿ, ಉಡಕಿ ಮೂಲಕ ವಿಧವಾ ವಿವಾಹಕ್ಕೆ ಅವಕಾಶವಿತ್ತು. ಆದರೆ ಮೇಲ್ವರ್ಗದ ಮಹಿಳೆಯರಿಗೆ ಈ ಅವಕಾಶವೂ ಇದ್ದಿಲ್ಲ. ವಿವಾಹ, ಕುಟುಂಬಗಳೆಂಬ ಸಾಮಾಜಿಕ ಸಂಸ್ಥೆಗಳನ್ನು ಪುರುಷಪ್ರಧಾನ ಪಾಳೇಗಾರಿ ಮೌಲ್ಯಗಳೇ ಹುಟ್ಟುಹಾಕಿವೆ. ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ವಿವಾಹ ಸಂಸ್ಥೆಯನ್ನು ಬಲವಾಗಿ ಬಳಸಿಕೊಳ್ಳಲಾಗಿದೆ ಎನ್ನುತ್ತಾರೆ ಚಿಂತಕರು.

ಈಗ ಜಯಾ ಬಚ್ಚನ್ ಅವರ ಹೇಳಿಕೆಯ ಬಗ್ಗೆ ಸಾಂಪ್ರದಾಯಿಕ ಮೌಲ್ಯಗಳ ಪ್ರತಿಪಾದಕರು ಇದನ್ನು "ಭಾರತೀಯ ಕುಟುಂಬ ವ್ಯವಸ್ಥೆಯನ್ನು ದುರ್ಬಲಗೊಳಿಸುವ" ಕಳಪೆ ಯೋಚನೆ ಎಂದು ಟೀಕಿಸಿದ್ದಾರೆ. ಕೆಲವರು ಇದು ಎಲೈಟ್ ಕಲ್ಪನೆ ಎಂದಿದ್ದಾರೆ. ಅಂತೂ ಸಾರ್ವಜನಿಕ ವಾದ ವಿವಾದಗಳು ಏನೇ ಇರಲಿ ಮದುವೆ ಎಂಬುದು ದಿಲ್ಲಿಯಲ್ಲಿ ಪ್ರಚಲಿತವಿರುವ ಒಂದು ನುಡಿಗಟ್ಟಿನಂತೆ" ಅದು ಸಿಹಿಯಾದ ಲಡ್ಡುವಿದ್ದಂತೆ; ತಿಂದರೂ ಕಷ್ಟ ತಿನ್ನದಿದ್ದರೂ ಕಷ್ಟ. ಯಾವುದೇ ಸಂಬಂಧವಿರಲಿ ಅಲ್ಲಿ ಸವಾಲುಗಳಿದ್ದೇ ಇರುತ್ತವೆ. ಇದೇ ನೆಪದಲ್ಲಿ ಆಧುನಿಕ ಜೀವನ ಮೌಲ್ಯಗಳು ವೇಗವಾಗಿ ಬದಲಾಗುತ್ತಿರುವ ಹೊತ್ತಿನಲ್ಲಿ ವಿವಾಹ ಸಂಸ್ಥೆಯ ಬಗ್ಗೆ ಆರೋಗ್ಯಕರವಾದ ಚರ್ಚೆಗಳಾದರೆ, ಸಂವಾದಗಳಾದರೆ ಒಳ್ಳೆಯದೇ ಅಲ್ಲವೇ?

(ಕೃಪೆ : ಈದಿನಾ.ಕಾಂ)

– ರೇಣುಕಾ ನಿಡಗುಂದಿ

## ಮೊದಲನೇ ಪುಟದಿಂದ

### ಮಾಜಿ ಸಚಿವ ಸಿಎಂ ಇಬ್ರಾಹಿಂ ಘೋಷಣೆ

ವಿಚಾರದಲ್ಲಿ ಕರ್ನಾಟಕ ಇಬ್ಭಾಗ ಆಗುತ್ತದೆ, ಇವತ್ತು ರಾಜ್ಯ ಸರ್ಕಾರ ಸಂಪೂರ್ಣ ವೈಪಲ್ಯವಾಗಿದೆ. ಒಂದೊಂದು ವಸ್ತುಗಳ ಬೆಲೆ ಹೆಚ್ಚಳವಾಗಿದೆ. ನಮ್ಮ ಹೊಸ ಪಕ್ಷಕ್ಕೆ ಎಲ್ಲಾರ ಸಹಕಾರ ಬೇಕು. ರಾಜ್ಯದ ಜನ ಸಂಕಷ್ಟದಲ್ಲಿದ್ದಾರೆ. ಸರ್ಕಾರಗಳು ಕೆಲಸ ಮಾಡುತ್ತಿಲ್ಲ. ನಾನು, ನೀನು, ಎನ್ನುವ ಹೋರಾಟ ನಡೆಯುತ್ತಿದೆ.

ಬೆಳಗಾವಿಯಲ್ಲಿ ಡಿನ್ನರ್ ಮಾಡುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಕರ್ನಾಟಕ ಎರಡು ಭಾಗವಾಗುತ್ತದೆ. ಹೀಗಾಗಿ ಜನರಿಗಾಗಿ ನಾವು ಒಂದು ಪಕ್ಷವನ್ನ ಸ್ಥಾಪನೆ ಮಾಡುತ್ತಿದ್ದೇವೆ. ಎಲ್ಲಾ ಪಕ್ಷಗಳು ನಮ್ಮನ್ನ ಬಳಸಿಕೊಳ್ಳಕೊಂಡರು, ಆದರೆ, ಏನು ಮಾಡಲಿಲ್ಲ ಎಂದು ಕಿಡಿಕಾರಿದರು.

### ಥಂಡಾ ಹೊಡೆದ ರಾಜ್ಯದ ಜನ, ನಾಲ್ಕೈದು ದಿನ ಗಡಗಡ ನಡುಕ

10.2 ಡಿ.ಸೆ., ಆಗುಂಬೆಯಲ್ಲಿ 9.3 ಡಿ.ಸೆ., ಬೆಂಗಳೂರು ನಗರದಲ್ಲಿ 14.5 ಡಿ.ಸೆ., ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 12.9 ಡಿ.ಸೆ., ಚಿತ್ರದುರ್ಗದಲ್ಲಿ 14.9 ಡಿ.ಸೆ., ದಾವಣಗೆರೆಯಲ್ಲಿ 9 ಡಿ.ಸೆ., ಹಾಸನದಲ್ಲಿ 8.7 ಡಿ.ಸೆ., ಮಂಡ್ಯ, ಚಿಂತಾಮಣಿಯಲ್ಲಿ 11.2 ಡಿ.ಸೆ., ಮೈಸೂರಿನಲ್ಲಿ 15.2 ಡಿ.ಸೆ.ನಷ್ಟು ಕನಿಷ್ಠ ತಾಪಮಾನ ದಾಖಲಾಗಿದೆ. ಬಹುತೇಕ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನವು 28-29 ಡಿ.ಸೆ.ನಷ್ಟು ದಾಖಲಾಗಿರುತ್ತದೆ.

### ಸಮಾಜದಲ್ಲಿ ಆರ್ಥಿಕವಾಗಿ ಪ್ರಗತಿ ಅಸಾಧ್ಯ – ಮುರ್ತುಜಾ

ಮರೆಯಾಗುತ್ತಿದೆ.

ಭಾರತದಲ್ಲಿ ಧಾರ್ಮಿಕ ಸಾಮರಸ್ಯದ ಸುಂದರ ಉದಾಹರಣೆಗಳನ್ನು ಹುಡುಕಲು ನಾವು ಸುತ್ತಲೂ ನೋಡಬೇಕಾಗಿತ್ತು. ಅಲ್ಲಿ ವಿವಿಧ ಧರ್ಮಗಳ ಜನರು ಮಾನವೀಯತೆಯ ಮನೋಭಾವದಿಂದ ಒಟ್ಟುಗೂಡುತ್ತಾರೆ. ಭಾರತದ ವೈವಿಧ್ಯತೆ ಮತ್ತು ಸಹಿಷ್ಣುತೆಯ ಶ್ರೀಮಂತ ಪರಂಪರೆ ಹೊಂದಿದೆ ಎಂದರು.

ನಗರಸಭೆ ಮಾಜಿ ಅಧ್ಯಕ್ಷೆ ಮಂಜುಳಾ ಪಾಟೀಲ್ ಮಾತನಾಡಿ, ಕಲಿಕೆಯೆ ಸಾಧನೆಯ ಮೂಲ ಭದ್ರ ಬುನಾದಿಯಾಗಿದೆ. ಮಕ್ಕಳು ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಸಾಧಕರ ಸಾಲಿಗೆ ಯುವ ಜನಾಂಗ ಮುಂದೆ ಬರಬೇಕು ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮವನ್ನು ವೆಂಕಟೇಶ ಉದ್ಘಾಟಿಸಿದರು. ಕಸಾಪ ಅಧ್ಯಕ್ಷ ಹೆಚ್.ಎಫ್.ಮಸ್ಕಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅನ್ವಿತಾ ಕಾಲೇಜಿನ ಆಡಳಿತ ಅಧಿಕಾರಿ ಗಂಗನಗೌಡ ಪೊಲೀಸ್ ಪಾಟೀಲ್, ವರ್ತಕ ಅಮರೇಶ ಮಾಡಸಿರವಾರ, ವರದಿಗಾರ ಯಮನಪ್ಪ ಪವಾರ ಉದಯವಾಣಿ, ಮುಖಂಡ ವೆಂಕಟೇಶ ನಂಜಲದಿನ್ನಿ, ನಿವೃತ್ತ ಶಿಕ್ಷಕರಾದ ಚಂದ್ರಶೇಖರ ಕಗ್ಗೋಡ, ಬೀರಪ್ಪ ಸಂಭೋಜಿ, ಉಪನ್ಯಾಸಕ ಡಾ.ಬಸವರಾಜ ಪಿ.ನಾಯಕ ಇದ್ದರು.

ವೀರೇಶ ನಾಯಕ ಕನ್ನಾರಿ ಸ್ವಾಗತಿಸಿದರು. ಕಸಾಪ ಗೌರವ ಕಾರ್ಯದರ್ಶಿ ನಾಗರಾಜ ಅರಳಿಮರದ್ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಹೆಚ್.ಎಂ.ಶ್ರೀಶೈಲ ವಂದಿಸಿದರು.

### BJP ನಾಯಕರು ನನ್ನನ್ನು ಹುಡುಕ್ತಾರೆ – ಯತ್ನಾಳ್

ಕೆಲವರು ನಮ್ಮ ಇತಿಹಾಸ ತಿದ್ದಿದ್ದಾರೆ. ಈ ಸರ್ಕಾರ ದ್ವೇಷ ಭಾಷಣ ಬಗ್ಗೆ ಕಾಯ್ದೆ ತರುತ್ತಿದೆ. ನಾನು ನಿಮಗೆ ಪರೋಕ್ಷವಾಗಿ ಹೇಳುತ್ತೇನೆ, ನೀವು ಅಷ್ಟರಲ್ಲಿ ತಿಳಿದುಕೊಳ್ಳಿ ಎನ್ನುತ್ತಾ ರಾಜ್ಯ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ದೇಶದಲ್ಲಿ ಶಿವಾಜಿ ಮಹಾರಾಜರ ಆಡಳಿತ ಬರಬೇಕಾಗಿದೆ: ದುಶ್ಚಟಗಳಿಗೆ ದಾಸರಾಗಿದ್ದೀರಿ, ನೀವು ಶಿವಾಜಿ ಮಹಾರಾಜರ ಶೌರ್ಯ ಅಳವಡಿಸಿಕೊಳ್ಳಿ. ಈ ದೇಶದಲ್ಲಿ ಶಿವಾಜಿ ಮಹಾರಾಜರ ಆಡಳಿತ ಬರಬೇಕಾಗಿದೆ ಎಂದರು.

ಸುವರ್ಣಸೌಧದಲ್ಲಿ ಉತ್ತರ ಕರ್ನಾಟಕದ ಶಾಸಕರು ಕಸ ಗುಡಿಸಲು ಇರುವುದೇನು?, ದಕ್ಷಿಣ ಕರ್ನಾಟಕದ ಶಾಸಕರು ನಮ್ಮ ಬಗ್ಗೆ ಮಾತನಾಡುತ್ತಾರೆ, ನಾನು ಅವರ ಮಾತು ಕೇಳಬೇಕೇನು ಎಂದು ಪ್ರಶ್ನಿಸಿದರು.

### ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ನಿಧನ

ಬಲಪಡಿಸಲು ಶ್ರಮಿಸಿದ್ದರು, ಅವರ ನಿಧನದಿಂದ ಒಬ್ಬ ಶ್ರೇಷ್ಠ ಮುತ್ಸದ್ದಿಯನ್ನು ಹಾಗೂ ಮಾರ್ಗದರ್ಶಕರನ್ನು ನಾವು ಕಳೆದುಕೊಂಡಿದ್ದೇವೆ ಎಂದು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಶಾಮನೂರು ಶಿವಶಂಕರಪ್ಪ ಅವರು ನಮ್ಮ ತಂದೆ ಭೀಮಣ್ಣ ಖಂಡ್ರೆ ಹಾಗೂ ತಮಗೆ ತುಂಬಾ ಆತ್ಮೀಯರಾಗಿದ್ದರು ಅವರ ನಿಧನದಿಂದ ಆಘಾತವಾಗಿದೆ ಎಂದು ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಅತ್ಯಂತ ಹಿರಿಯ ಸದಸ್ಯರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ, ಈ ನೋವಿನ ಸಂದರ್ಭದಲ್ಲಿ ಸಚಿವ ಸಂಪುಟದ ಸಹೋದ್ಯೋಗಿಯಾದ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಅವರ ಕುಟುಂಬದ ಎಲ್ಲರಿಗೂ ಶಾಮನೂರು ಅಣ್ಣನವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

## ತಾಲೂಕು ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪ್ರಕಾಶ ಪಾಟೀಲ್ ಅಮರಾಪುರ ನೇಮಕ

ಜನವಾದಿ ವಾರ್ತೆ



ದೇವದುರ್ಗ ಡಿ 14– ಚುಟುಕು ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಾದ ಎಂ.ಜಿ.ಆರ್.ಅರಸು ಅವರ ಸೂಚನೆಯಂತೆ ತಾಲೂಕು ಚುಟುಕು ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರನ್ನಾಗಿ ಪ್ರಕಾಶ ಪಾಟೀಲ್ ಅಮರಾಪುರ ಇವರನ್ನು 3 ವರ್ಷದ ಅವಧಿಗೆ ನೇಮಕ ಮಾಡಲಾಗಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ನರಸಿಂಗರಾವ್ ಸರಕೀಲ್ ಹಾಗೂ ಪ್ರಧಾನ ಕಾರ್ಯದರ್ಶಿ ಬಸವರಾಜ ಬ್ಯಾಗವಾಟ ಜಂಟಿಯಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಷತ್ತಿನ ನೂತನ ಅಧ್ಯಕ್ಷರು ಪರಿಷತ್ತಿನ ನಿಯಮಾವಳಿಗಳನ್ನು ಪಾಲಿಸುವುದರೊಂದಿಗೆ, ಜಿಲ್ಲಾ ಘಟಕದ ಸೂಚನೆಯಂತೆ ಪರಿಷತ್ತಿನ ಪೂರ್ಣ ಪ್ರಮಾಣದ ಪದಾಧಿಕಾರಿಗಳನ್ನು ಜಿಲ್ಲಾ ಸಮಿತಿಯಿಂದ ಅನುಮತಿ ಪಡೆದುಕೊಂಡು ನೇಮಕ ಮಾಡಬೇಕು.

ತಾಲೂಕಿನ ವಿವಿಧ ಶಾಲಾ ಕಾಲೇಜುಗಳಲ್ಲಿ, ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯ ಮತ್ತು ಚುಟುಕು ಸಾಹಿತ್ಯದ ಆಸಕ್ತಿ, ಅಭಿರುಚಿ ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸಕಲರಿಗೂ ಚುಟುಕು ಸಾಹಿತ್ಯದ ಪರಿಚಯ ಮತ್ತು ಚುಟುಕು ಸಾಹಿತ್ಯ ಪರಿಷತ್ತಿನ ಬೆಳವಣಿಗೆ ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಜಿಲ್ಲಾ ಪರಿಷತ್ತಿನೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ನಿಯಮಾನುಸಾರ ಕಾರ್ಯ ಚಟುವಟಿಕೆಗಳಲ್ಲಿ ತೊಡಗಬೇಕೆಂದು ಆದೇಶ ಪತ್ರ ನೀಡಿರುವುದಾಗಿ ಪರಿಷತ್ತಿನ ಜಿಲ್ಲಾಧ್ಯಕ್ಷ ನರಸಿಂಗರಾವ್ ಸರಕೀಲ್ ಹಾಗೂ ಪ್ರಧಾನ ಕಾರ್ಯದರ್ಶಿ ಬಸವರಾಜ ಬ್ಯಾಗವಾಟ ಜಂಟಿಯಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೇವದುರ್ಗ ಕಾ.ನಿ.ಪ ಸಂಘದ ಅಧ್ಯಕ್ಷರಾಗಿ ನರಸಿಂಗರಾವ್ ಸರ್ಕಿಲ್, ಪ್ರಧಾನ ಕಾರ್ಯದರ್ಶಿಯಾಗಿ ಅಳ್ಳುಂಡಿ ಆಯ್ಕೆ

ಜನವಾದಿ ವಾರ್ತೆ



ದೇವದುರ್ಗ ಡಿ 14– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದೇವದುರ್ಗ ತಾಲೂಕು ಘಟಕದ ಅಧ್ಯಕ್ಷರಾಗಿ ನರಸಿಂಗರಾವ್ ಸರ್ಕಿಲ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ರವಿಕುಮಾರ ಅಳ್ಳುಂಡಿ ಆಯ್ಕೆಯಾದರು.

ದೇವದುರ್ಗ ಪಟ್ಟಣದಲ್ಲಿ ಎಪಿಎಂಸಿ ಸಭಾಂಗಣದಲ್ಲಿ ರವಿವಾರ ಬೆಳಿಗ್ಗೆ ತಾಲೂಕು ಘಟಕದ ಚುನಾವಣಾ ಪ್ರಕ್ರಿಯೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ನರಸಿಂಗರಾವ್ ಸರ್ಕಿಲ್ ಮತ್ತು ಬೆಳ್ಳಿಯಪ್ಪ ಬಲ್ಲಿದವ್ ನಾಮಪತ್ರ ಸಲ್ಲಿಸಿದ್ದರೆ, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರವಿಕುಮಾರ ಅಳ್ಳುಂಡಿ ಹಾಗೂ ನಾಗರಾಜ್ ತೇಲ್ಕರ್ ಉಮೇದುವಾರರಾಗಿದ್ದರು. ಈ ಎರಡು ಸ್ಥಾನಗಳಿಗೆ ಮತದಾನ ನಡೆಯಿತು.

ಇನ್ನೂ ಎರಡು ಉಪಾಧ್ಯಕ್ಷ ಸ್ಥಾನಗಳಿಗೆ ಬೂದಿಬಸವ ಮತ್ತು ಆನಂದಗುಡಿ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾದರು. ಕಾರ್ಯದರ್ಶಿ ಸ್ಥಾನಕ್ಕೆ ಕೆ. ಬಂದೇನವಾಜ್ ಹಾಗೂ ಚಂದ್ರಶೇಖರ ನಾಡಗೌಡ, ಖಜಾಂಚಿ ಸ್ಥಾನಕ್ಕೆ ರಂಗನಾಥ ಕೊಂಬಿನ್ ಮಾತ್ರ ಉಮೇದುವಾರಿಕೆ ಸಲ್ಲಿಸಿದ್ದರಿಂದ ಈ ಐದು ಪದಾಧಿಕಾರಿ ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು.

ಜಿಲ್ಲಾಧ್ಯಕ್ಷ ಆರ್. ಗುರುನಾಥ ಅವರು ಚುನಾವಣಾ ಫಲಿತಾಂಶ ಪ್ರಕಟಿಸಿ, ವಿಜೇತ ಪದಾಧಿಕಾರಿಗಳಿಗೆ ಪ್ರಮಾಣಪತ್ರ ವಿತರಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ಧಯ್ಯ ಸ್ವಾಮಿ ಕುಕನೂರು, ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ, ಜಿಲ್ಲಾ ಉಪಾಧ್ಯಕ್ಷರಾದ ಸೂಗೂರೇಶ ಎಸ್. ಗುಡಿ, ಮಹಾನಂದ ನಾಯಕ, ಜಿಲ್ಲಾ ಖಜಾಂಚಿ ಮಲ್ಲಿಕಾರ್ಜುನಯ್ಯ ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಲಕ್ಷ್ಮಿ ಪ್ರಸನ್ನ ಜೈನ್ ಅವರ ನೇತೃತ್ವದಲ್ಲಿ ಚುನಾವಣಾ ಪ್ರಕ್ರಿಯೆ ನಡೆಸಲಾಯಿತು.

## ರಾಯಚೂರಿನ ಸತ್ಯನಾರಾಯಣ ಮುಜುಮದಾರರಿಗೆ ಪ್ರತಿಷ್ಠಿತ 'ಮಿಥಿಲಾ ರತ್ನ' ಪ್ರಶಸ್ತಿ

ಜನವಾದಿ ವಾರ್ತೆ




ರಾಯಚೂರು ಡಿ 14– ರಾಯಚೂರಿನ ಖ್ಯಾತ ಸಾಹಿತಿಗಳು ಹಾಗೂ ಸಂಶೋಧಕರು ಆಗಿರುವ ಸತ್ಯನಾರಾಯಣ ಮುಜುಮದಾರ ಅವರಿಗೆ ಡಿಸೆಂಬರ್ 13, 2025 ರಂದು ವಾರಣಾಸಿಯ ನಾಗರಿ ಪ್ರಚಾರಿಣಿ ಸಭಾ, ವಿಶ್ವೇಶ್ವರ ಗಂಜಿನಲ್ಲಿ ನಡೆದ ಮಹಾಕವಿ ವಿದ್ಯಾಪತಿ ಮಹೋತ್ಸವ–2025 ಕಾರ್ಯಕ್ರಮದಲ್ಲಿ ಪ್ರತಿಷ್ಠಿತ 'ಮಿಥಿಲಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸತ್ಯನಾರಾಯಣ ಮುಜುಮದಾರ ಅವರು ಶ್ರೀ ಯಾಜ್ಞವಲ್ಕ್ಯ ಮಹರ್ಷಿಗಳ ಬದುಕು, ಸಾಧನೆ ಹಾಗೂ ತತ್ವಜ್ಞಾನದ ಕುರಿತು ದಶಕಗಳಿಂದ ನಡೆಸಿದ ಅಪ್ರತಿಮ ಸಂಶೋಧನೆ ಮತ್ತು ಸಮಾಜಕ್ಕೆ ಅವರು ಸಲ್ಲಿಸಿದ ನಿರಂತರ ಸೇವೆಗಳನ್ನು ಈ ಮಿಥಿಲಾ ರತ್ನ ಪ್ರಶಸ್ತಿಯು ಗುರುತಿಸಿದೆ. ಅವರ ದೀರ್ಘಕಾಲದ ಅಧ್ಯಯನ ಹಾಗೂ ಸಮರ್ಪಣಾ ಭಾವಕ್ಕೆ ಸಂದ ಶ್ರೇಷ್ಠ ಗೌರವ ಇದಾಗಿದೆ ಎಂದು ಪ್ರಶಸ್ತಿ ಪ್ರದಾನ ಸಮಿತಿಯ ಸದಸ್ಯರು ತಿಳಿಸಿದ್ದಾರೆ.

ಉತ್ತರ ಪ್ರದೇಶದ ಮೈಥಿಲ ಸಮಾಜವು ಅದ್ದೂರಿಯಾಗಿ ಆಯೋಜಿಸಿದ್ದ ಈ ಸಾಂಸ್ಕೃತಿಕ ಕಾರ್ಯಕ್ರಮವು, ಮಿಥಿಲಾ ಪರಂಪರೆ ಮತ್ತು ಮಹಾಕವಿ ವಿದ್ಯಾಪತಿಯವರ ವೈಭವವನ್ನು ಸಾರುವ ವೇದಿಕೆಯಾಗಿತ್ತು. ದೇಶದ ನಾನಾ ಭಾಗಗಳಿಂದ ಆಗಮಿಸಿದ್ದ ಸಾಹಿತ್ಯಾಸಕ್ತರು, ವಿದ್ವಾಂಸರು ಹಾಗೂ ಗಣ್ಯರು ಈ ವಿಶೇಷ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು.

ರಾಯಚೂರು ಜಿಲ್ಲೆಯ ಮುಜುಮದಾರರಿಗೆ ಈ ಪ್ರಶಸ್ತಿ ಸಂದಿರುವುದು ರಾಜ್ಯಕ್ಕೆ ಮತ್ತಷ್ಟು ಗೌರವ ತಂದಿದೆ. ಈ ಸಂದರ್ಭದಲ್ಲಿ ಅಖಿಲ ಭಾರತ ಕಣ್ವ ಪರಿಷತ್ ರಾಜ್ಯ ಅಧ್ಯಕ್ಷ ಕಿಶನರಾವ್ ಕುಲಕರ್ಣಿ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ವಿನುತ ಎಸ್. ಜೋಶಿ ಅವರು ಯಾಜ್ಞವಲ್ಕ್ಯ ಮಹರ್ಷಿಗಳ ಕುರಿತು ಮುಜುಮದಾರ ಅವರು ಮಾಡಿರುವ ಆಳವಾದ ಸಂಶೋಧನೆ ಮತ್ತು ಸೇವೆಗಳನ್ನು ಗುರುತಿಸಿ ಈ ಮಹತ್ವದ ಗೌರವವನ್ನು ಪ್ರದಾನ ಮಾಡಿರುವುದು ಹೆಮ್ಮೆಯ ವಿಷಯ ಎಂದು ಹರ್ಷ ವ್ಯಕ್ತ ಪಡಿಸಿದ್ದಾರೆ.

## ಹೃದಯಘಾತಕ್ಕೆ ಒಳಗಾಗಿದ್ದ 81 ಅಯ್ಯಪ್ಪ ಭಕ್ತರಿಗೆ ಯಶಸ್ವಿ ಚಿಕಿತ್ಸೆ




ಪತ್ತನಂತಿಟ್ಟ ಡಿ 14– ಕೇರಳ ಆರೋಗ್ಯ ಇಲಾಖೆ ಸ್ಥಾಪಿಸಿದ ವೈದ್ಯಕೀಯ ಆರೈಕೆ ಸೌಲಭ್ಯಗಳು ಪ್ರಸ್ತುತ ಶಬರಿಮಾಲೆ ಯಾತ್ರೆಯ ಸಂದರ್ಭದಲ್ಲಿ ಹೃದಯಾಘಾತದಿಂದ ಬಳಲುತ್ತಿದ್ದ 81 ಅಯ್ಯಪ್ಪ ಭಕ್ತರನ್ನು ಉಳಿಸಲು ಸಹಾಯ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

24/7 ಕಾರ್ಯನಿರ್ವಹಿಸುವ ಆಧುನಿಕ ಆರೋಗ್ಯ ಕೇಂದ್ರಗಳು, ತಜ್ಞ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಯೊಂದಿಗೆ, ಸಮಯೋಚಿತ ವೈದ್ಯಕೀಯ ಹಸ್ತಕ್ಷೇಪವನ್ನು ಸಕ್ರಿಯಗೊಳಿಸಿ ತೀರ್ಥಯಾತ್ರೆಯ ಸಮಯದಲ್ಲಿ ಹಲವಾರು ಜೀವಗಳನ್ನು ಉಳಿಸಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವರದಿಯಾದ 103 ಹೃದಯಾಘಾತ ಪ್ರಕರಣಗಳಲ್ಲಿ, 81 ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಯಿತು. ಇದಲ್ಲದೆ, ತ್ವರಿತ ವೈದ್ಯಕೀಯ ಆರೈಕೆಯ ಮೂಲಕ ವರದಿಯಾದ 25 ಹೃದಯಾಘಾತ ಪ್ರಕರಣಗಳಲ್ಲಿ ಆರು ಜೀವಗಳನ್ನು ಉಳಿಸಲಾಗಿದೆ ಎಂದು ರಾಜ್ಯ ಸರ್ಕಾರದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ವರದಿಯಾದ ಎಲ್ಲಾ 44 ರೋಗಗ್ರಸ್ತವಾಗುವಿಕೆ ಪ್ರಕರಣಗಳಿಗೂ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಯಿತು ಎಂದು ಅದು ಹೇಳಿದೆ.ಜೀವ ಉಳಿಸುವ ಕ್ರಮಗಳಿಗೆ ವಿಶೇಷ ಒತ್ತು ನೀಡುವ ಮೂಲಕ, ಬೆಟ್ಟದ ಪಾದಯಾತ್ರೆಯಲ್ಲಿ ಒಳಗೊಂಡಿರುವ ದೈಹಿಕ ಒತ್ತಡವನ್ನು ಪರಿಗಣಿಸಿ ಹೃದಯ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಆರೋಗ್ಯ ಇಲಾಖೆ ತನ್ನ ಸಿದ್ಧತೆಯನ್ನು ಬಲಪಡಿಸಿದೆ. ಹೃದ್ರೋಗ ಘಟಕಗಳನ್ನು ಸ್ಥಾಪಿಸಲಾಗಿದೆ ಮತ್ತು ಸ್ಟ್ರೆಪ್ಟೋಕಿನೇಸ್ ಮತ್ತು ಟೆನೆಕ್ಟೆಪ್ಲೇಸ್‌ನಂತಹ ಅಗತ್ಯ ಜೀವ ಉಳಿಸುವ ಔಷಧಿಗಳನ್ನು ಲಭ್ಯವಾಗುವಂತೆ ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಇಲ್ಲಿಯವರೆಗೆ, ಶಬರಿಮಲೆ ಮತ್ತು ಹತ್ತಿರದ ಆಸ್ಪತ್ರೆಗಳಲ್ಲಿ ಒಟ್ಟು 95,385 ಹೊರರೋಗಿಗಳು ಚಿಕಿತ್ಸೆ ಪಡೆದಿದ್ದಾರೆ.ಹೃದಯ ಸಂಬಂಧಿ ಪ್ರಕರಣಗಳ ಜೊತೆಗೆ, 337 ಯಾತ್ರಿಕರನ್ನು ಸುಧಾರಿತ ಆರೈಕೆಗಾಗಿ ಇತರ ಆಸ್ಪತ್ರೆಗಳಿಗೆ ಉಲ್ಲೇಖಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಪಂಪಾದಿಂದ ಸನ್ನಿಧಾನಕ್ಕೆ ಚಾರಣ ಮಾರ್ಗದಲ್ಲಿ 17 ಕೇಂದ್ರಗಳು ಸೇರಿದಂತೆ ಒಟ್ಟು 22 ತುರ್ತು ವೈದ್ಯಕೀಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಪ್ರತಿ ಕೇಂದ್ರವು ತರಬೇತಿ ಪಡೆದ ವೈದ್ಯಕೀಯ ಅಧಿಕಾರಿಗಳು, ಸಿಬ್ಬಂದಿ ದಾದಿಯರು, ಇಸಿಜಿ ಯಂತ್ರಗಳು, ಆಮ್ಲಜನಕ ಸಿಲಿಂಡರ್‌ಗಳು, ತುರ್ತು ಔಷಧಿಗಳು ಮತ್ತು ಆಂಬ್ಯುಲೆನ್ಸ್ ಸೇವೆಗಳನ್ನು ಹೊಂದಿದೆ ಎಂದು ಅವರು ಹೇಳಿದರು.ಸನ್ನಿಧಾನಂನಲ್ಲಿರುವ ಆಸ್ಪತ್ರೆಯಲ್ಲಿ ಆಧುನಿಕ ಹೃದ್ರೋಗ ಘಟಕ, ವೆಂಟಿಲೇಟರ್‌ಗಳು, ಆಪರೇಷನ್ ಥಿಯೇಟರ್, ಐಸಿಯು, ಎಕ್ಸ್–ರೇ ಮತ್ತು ಪ್ರಯೋಗಾಲಯ ಸೌಲಭ್ಯಗಳು ಮತ್ತು ತಜ್ಞ ವೈದ್ಯರು ಇದ್ದಾರೆ.

ಯಾತ್ರಿಕರು ಸುರಕ್ಷಿತವಾಗಿ ಪಾದಯಾತ್ರೆ ಕೈಗೊಳ್ಳಲು ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ತೊಂದರೆಗಳಿಲ್ಲದೆ ದರ್ಶನವನ್ನು ಪೂರ್ಣಗೊಳಿಸಲು ಆರೋಗ್ಯ ಇಲಾಖೆಯು ಅಗತ್ಯವಿರುವ ಎಲ್ಲ ಬೆಂಬಲವನ್ನು ನೀಡಲು ಬದ್ಧವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅಜಾತಶತ್ರು – ಸಿಎಂ ಸಿದ್ದರಾಮಯ್ಯ



ಹುಬ್ಬಳ್ಳಿ ಡಿ 14– ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅಜಾತಶತ್ರು. ಎಲ್ಲ ಪಕ್ಷದವರ ಜೊತೆ ಸ್ನೇಹ, ಬಾಂಧವ್ಯ ಇಟ್ಟುಕೊಂಡವರು. ಹೀಗಾಗಿ ಪಕ್ಷಾತೀತವಾಗಿ ಹೊರಟ್ಟಿ ಅವರನ್ನು ಸನ್ಮಾನಿಸಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ನೆಹರು ಮೈದಾನದಲ್ಲಿ ಶನಿವಾರ ಬಸವರಾಜ್ ಹೊರಟ್ಟಿ ಅಭಿನಂದನಾ ಸಮಿತಿ ಹಮ್ಮಿಕೊಂಡಿದ್ದ ಪಶ್ಚಿಮ ಮತಕ್ಷೇತ್ರದಿಂದ ಸತತವಾಗಿ ಎಂಟು ಬಾರಿ ಆಯ್ಕೆಯಾಗಿ ವಿಶ್ವದಾಖಲೆ ಮಾಡಿದ 'ಬಸವರಾಜ್ ಹೊರಟ್ಟಿ ಅವರಿಗೆ ಗೌರವ ಸನ್ಮಾನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೊರಟ್ಟಿ ಅವರ ವ್ಯಕ್ತಿತ್ವದಿಂದ ಮಾತ್ರ ಇಂಥ ಕಾರ್ಯಕ್ರಮ ಸಾಧ್ಯ. ನೇರ, ದಿಟ್ಟ ನುಡಿಯ ರಾಜಕಾರಣಿ ಅವರು. 1980ರ ಕಾಲಘಟ್ಟದಲ್ಲಿ ಅವರು ರಾಜಕೀಯಕ್ಕೆ ಬಂದರೆ, ನಾನು 1983 ರಿಂದ ವಿಧಾನಸೌಧಕ್ಕೆ ಬಂದೆ. ಈವರೆಗೆ ನಾಲ್ಕು ದಶಕಗಳವರೆಗೆ ನಮ್ಮ ಸ್ನೇಹವಿದೆ. ಮುಂದೆಯೂ ಇರಲಿದೆ. ಅಧಿಕಾರದ ಮದವಿಲ್ಲ, ಆಡಂಬರವಿಲ್ಲದ ಅವರು, ಸ್ನೇಹಜೀವಿಯಾಗಿದ್ದಾರೆ. ಶಿಕ್ಷಕರು ಪ್ರಜ್ಞಾವಂತರು, ಅಂಥ ಕ್ಷೇತ್ರದಲ್ಲಿ ಎಂಟು ಬಾರಿ ಗೆದ್ದಿದ್ದಾರೆ ಎಂದರೆ ಅವರ ಕೆಲಸವೇ ಅದಕ್ಕೆ ಕಾರಣ ಎಂದು ಸಿಎಂ ಹೊಗಳಿದರು.

ಸಮಾಜದಲ್ಲಿ ಎರಡು ವಿಧದ ಜನರು ಇರುತ್ತಾರೆ. ಒಂದು ಅಧಿಕಾರದಿಂದ ವ್ಯಕ್ತಿತ್ವ ಬೆಳೆಸಿಕೊಳ್ಳುತ್ತಾರೆ. ಇನ್ನೊಬ್ಬರು ತಮ್ಮ ಸ್ಥಾನಮಾನದ ಹಿರಿಮೆಯಿಂದ ಗುರುತಿಸಿಕೊಳ್ಳುತ್ತಾರೆ. ಇವರು ಎರಡನೇ ವರ್ಗದವರು. ಅವರಲ್ಲಿ ಸೀನಿಯರ್, ಅಹಂಕಾರ ಭಾವ ಎಂದೂ ನೋಡೇ ಇಲ್ಲ. ನಾವಿಬ್ಬರೂ ಬೇರೆ ಪಕ್ಷದವರು. ಜೆಡಿಯು, ಜೆಡಿಎಸ್ ಒಂದಾಗಿದ್ದರೆ ಅವರ ಪ್ರಯತ್ನ ಯಶಸ್ವಿಯಾಗುತ್ತಿತ್ತು. ದೇವೇಗೌಡ್ರು ಒಂದಾಗಲು ಮನಸ್ಸು ಮಾಡಲಿಲ್ಲ. ಎಂಪಿ ಪ್ರಕಾಶ, ಬೈರೇಗೌಡ, ಬಸವರಾಜ ಬೊಮ್ಮಾಯಿ ಎಲ್ಲರೂ ಸೇರಿ ಬಂದಿದ್ದೆವು. ಮೇಲ್ಗಡೆ ಅದು ತೀರ್ಮಾನವಾಗಿಲಿಲ್ಲ. ರಾಜಕೀಯ ಪಕ್ಷ ಭದ್ರವಾಗಿರಬೇಕು ಎನ್ನುವುದು ಹೊರಟ್ಟಿ ಆಶಯವಾಗಿತ್ತು, ಅದು ಆಗಿಲ್ಲ ಎಂದರು.

ಯಡಳ್ಳಿಯಲ್ಲಿ ಮಾದರಿ ಶಾಲೆ ಮಾಡಿದ್ದಾರೆ, ಖಾಸಗಿ ಶಾಲೆಗಿಂತ ಅದು ಕಡಿಮೆ ಇಲ್ಲ. ಪ್ರತಿಯೊಬ್ಬರೂ ಅವರು ಓದಿದ ಶಾಲೆ ಅಭಿವೃದ್ಧಿ ಮಾಡಿದರೆ, ಶಿಕ್ಷಣದ ಕ್ರಾಂತಿಸಾಧ್ಯ. ಹೊರಟ್ಟಿ ಅವರನ್ನು ಹೋರಾಟದ ಹೊರಟ್ಟಿ ಎಂದೇ ಕರೆಯುತ್ತಾರೆ. ಮುಂದಿನ ಚುನಾವಣೆಗೂ ಅವರೇ ನಿಲ್ಲುತ್ತಾರೆ. ಈಗಾಗಲೇ ದಾಖಲೆ ಮಾಡಿದ್ದಾರೆ. ಯಾರೂ ಅದನ್ನು ಮುರಿಯಲು ಸಾಧ್ಯವಿಲ್ಲ. ಹೋದ ಬಾರಿ ಹೊರಟ್ಟಿ ಅವರನ್ನು ಸೋಲಿಸಲು ಹೋಗಿದ್ದೆ, ನಮ್ಮ ಅಭ್ಯರ್ಥಿ ಪರ ಪ್ರಚಾರಕ್ಕೆ ಹೋಗಿದ್ದೆ. ರಾಜಕಾರಣ ಬೇರೆ, ಸ್ನೇಹ ಬೇರೆ ಎಂದು ಸಿಎಂ ಹೇಳಿದರು.

ಸಭಾಪತಿಯಾಗಿ ನಿಷ್ಪಕ್ಷಪಾತವಾಗಿ ಸದನ ನಡೆಸುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ಕಾನೂನುಪರವಾಗಿ ಅಚ್ಚುಕಟ್ಟಾಗಿ ಎಲ್ಲ ಪಕ್ಷದವರನ್ನು ಗೌರವದಿಂದ ನೋಡುತ್ತಾರೆ. ಕೋಪಿಸಿಕೊಳ್ಳದೆ ಉತ್ತಮ ವ್ಯಕ್ತಿತ್ವ ಬೆಳೆಸಿಕೊಂಡಿದ್ದಾರೆ. ಅವರ ಅನುಭವದಿಂದ ಸದನಕ್ಕೆ ಮಾರ್ಗದರ್ಶನ ಮಾಡುವ ಕೆಲಸ ಮಾಡುತ್ತಿದ್ದಾರೆ. ಸಂಸದೀಯ ಪಟು ಆಗಿರುವುದರಿಂದ, ಯಾರಿಗೆ ಎಷ್ಟು ಸಮಯ ಕೊಡಬೇಕು ಎನ್ನುವುದು ತಿಳಿದಿದೆ. ಪಕ್ಷಾತೀತವಾಗಿ ಬೆದರಿಸಿ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮಿಬ್ಬರ ನಡುವೆ ಆತ್ಮೀಯತೆ ಇದ್ದರೂ ಸಹ, ಸಭಾಪತಿ ಸ್ಥಾನದಲ್ಲಿ ನ್ಯಾಯ ನೀಡುವ ಕೆಲಸ ಮಾಡುತ್ತಾರೆ. ಸ್ನೇಹವಿದೆ ಎಂದು ಉತ್ತೇಜನ ನೀಡುವ ಕೆಲಸವೂ ಮಾಡುವುದಿಲ್ಲ ಎಂದರು.

**ನಮ್ಮ ಪಕ್ಷದವರೇ ಸಭಾಪತಿಯಾಗಿದ್ದಾರೆ ಎನ್ನುವ ಭಾವವಿದೆ:** ಈಗ ನಾವು ಸಭಾಪತಿ ಆಗಲು ಒಂದು ವೋಟ್ ಕಡಿಮೆ ಇದೆ, ಮುಂದಿನ ವಿಧಾನ ಪರಿಷತ್ ಚುನಾವಣೆ ಆದ ಮೇಲೆ ಬಹುಮತ ಬರಬಹುದು ಎಂದುಕೊಂಡಿದ್ದೇನೆ. ಅಲ್ಲಿವರೆಗೆ ಇವರೇ ಮುಂದುವರಿಯುತ್ತಾರೆ. ಅವರ ಕಾರ್ಯವೈಖರಿಗೆ ಎಲ್ಲ ಸದಸ್ಯರು ಖುಷಿಯಾಗಿದ್ದಾರೆ. ಸರ್ಕಾರಕ್ಕೆ ಮುಜಗರ ಮಾಡುವ ಕೆಲಸ ಎಂದೂ ಮಾಡಿಲ್ಲ. ನಮ್ಮವರೇ, ನಮ್ಮ ಪಕ್ಷದವರೇ ಸಭಾಪತಿಯಾಗಿದ್ದಾರೆ ಎನ್ನುವ ಭಾವವಿದೆ ಎಂದು ಹೇಳಿದರು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿ, ಹೊರಟ್ಟಿ ಎಲ್ಲರ ಜೊತೆಗೂ ಸಂಬಾಳಿಸಿಕೊಂಡು ರಾಜಕೀಯ ಮಾಡಿದ್ದಾರೆ ಎನ್ನಲು ಈ ಕಾರ್ಯಕ್ರಮ ನಿದರ್ಶನ. ಹತ್ತು, ಹನ್ನೊಂದು ಬಾರಿ ಗೆದ್ದವರು ಇದ್ದಾರೆ. ಆದರೆ, ಶಿಕ್ಷಕರ ಕ್ಷೇತ್ರದಲ್ಲಿ ಬಲ್ಲವರು ಇದ್ದಾರೆ. ಪೀಳಿಗೆಗಳು ಬದಲಾಗುತ್ತಿವೆ. ಆದರೂ ಅವರಿಂದ ಆಯ್ಕೆಯಾಗಿದ್ದಾರೆ ಎಂದರೆ ಅವರ ವರ್ಚಸ್ಸೇ ಕಾರಣ. ಅವರದ್ದು ಲವ್ ಆ್ಯಂಡ್ ಹೇಟ್ ವ್ಯಕ್ತಿತ್ವ, ಶಿಕ್ಷಕರ ಕೆಲಸ ಮಾಡಿಕೊಡಲು ಯಾರನ್ನಾದರೂ ವಿರೋಧ ಕಟ್ಟಿಕೊಳ್ಳುತ್ತಾರೆ. ನಾಮಿನೇಷನ್ ಮಾಡಿದರೆ ಸಾಕು, ಅವರೇ ಎಂಎಲ್‌ಸಿ ಎನ್ನುವುದು ಪಕ್ಕಾ ಆಗಿದೆ. ನಿಸರ್ಗಪ್ರೇಮಿ, ಕೃಷಿಕರಾಗಿರುವ ಹೊರಟ್ಟಿ ರಾಜಕೀಯದಲ್ಲಿ ಲಿಮ್ಕಾ ದಾಖಲೆ ಮಾಡಿದ್ದಾರೆ. ಹೊರಟ್ಟಿಯವರನ್ನು ಸೋಲಿಸಲು ಯತ್ನಿಸಿದ್ದರೂ, ನಂತರ ಸಮಸ್ಯೆ ಬಗ್ಗೆ ಕರೆ ಮಾಡಿದರೆ ತಕ್ಷಣ ಪರಿಹಾರ ನೀಡುತ್ತಾರೆ. ಶೀಘ್ರ ಕೋಪಿ, ದೀರ್ಘ ದ್ವೇಷಿಯಲ್ಲ. ಸಿದ್ದರಾಮಯ್ಯ ಅವರ ಅವಧಿಯಲ್ಲಿ ಸಭಾಪತಿಯಾಗಿ ಪೂರ್ಣಗೊಳಿಸುತ್ತಾರೆ ಎನ್ನುವ ಆಶಯ ನಮ್ಮದಾಗಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, 45 ವರ್ಷ ವಿಧಾನ ಪರಿಷತ್ತಿನಲ್ಲಿ ಕರ್ತವ್ಯ ನಿರ್ವಹಿಸಿದ್ದು, ಅಲ್ಲಿ ಐವತ್ತು ವರ್ಷ ನಿರ್ವಹಿಸಬೇಕು. ಶಿಕ್ಷಕರಿಗೆ ವಿಶೇಷ ಕಾರ್ಯಕ್ರಮ, ಯೋಜನೆ ಜಾರಿಗೆ ತಂದು ಅವರ ಕಣ್ಮಣಿಯಾಗಿದ್ದಾರೆ. ಇನ್ನೂ ಮೂರು ವರ್ಷ ಅವಧಿಯಿದೆ. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಬೇಕು ಎಂದರು.

ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್, ಗ್ರಾಮೀಣ ಭಾಗದ ಸಾಮಾನ್ಯ ವ್ಯಕ್ತಿ ಇಷ್ಟುದೊಡ್ಡ ಸ್ಥಾನ ಅಲಂಕರಿಸಿದ್ದಾರೆ ಎಂದರೆ ಅದು ಸಂವಿಧಾನದ ಸಂಸ್ಕೃತಿಯ ದ್ಯೋತಕ. ಶಿಸ್ತುಬದ್ಧ ರಾಜಕೀಯ, ವ್ಯಕ್ತಿತ್ವ ಇದ್ದರೆ ಸಾಮಾನ್ಯನೂ ಉನ್ನತ ಸ್ಥಾನಕ್ಕೇರಬಹುದು ಎನ್ನಲು ಹೊರಟ್ಟಿ ನಿದರ್ಶನವಾಗಿದ್ದಾರೆ.

ಕೆಎಲ್‌ಇ ನಿರ್ದೇಶಕ, ಅಭಿನಂದನಾ ಸಮಿತಿ ಅಧ್ಯಕ್ಷ ಶಂಕರಣ್ಣ ಮುನವಳ್ಳಿ ಅವರು ಬಿನ್ನವತ್ತಳೆ ಓದಿ, ಹೊರಟ್ಟಿ ಅವರಿಗೆ ಸಮರ್ಪಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಪುಷ್ಪವೃಷ್ಟಿ ಸುರಿಸಿ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ, 'ಪಕ್ಷಾತೀತವಾಗಿ ನಡೆದ ಕಾರ್ಯಕ್ರಮ. ಹೇಗೆ ಋಣ ತೀರಿಸುವುದು ಎಂದು ತಿಳಿಯುತ್ತಿಲ್ಲ. ಯಾರಿಗೂ ದ್ರೋಹ ಬಗೆಯದೆ, ಎಲ್ಲರಿಗೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಪ್ರಮಾಣ ಮಾಡುತ್ತೇನೆ. ಭಟ್ಕಳದಿಂದ ಇಂಡಿವರೆಗಿನ ಜನರು ಬಂದಿದ್ದಾರೆ. ಜೀವನದಲ್ಲಿ ಮರೆಯಲಾಗದ ಕ್ಷಣ ನನ್ನದಾಗಿಸಿದ್ದಕ್ಕೆ ಸದಾ ಚಿರ ಋಣಿ. ಇದಕ್ಕಿಂತ ದೊಡ್ಡದು ನನ್ನ ಬದುಕಲ್ಲಿ ಮತ್ತೇನೂ ಇಲ್ಲ ಎಂದು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮಕ್ಕೂ ಪೂರ್ವ ಬಸವರಾಜ್ ಹೊರಟ್ಟಿ ಅವರನ್ನು ಲ್ಯಾಮಿಂಗ್ಟನ್ ಶಾಲೆ ಆವರಣದಿಂದ ನೆಹರು ಮೈದಾನದವರೆಗೆ ಅದ್ದೂರಿಯಾಗಿ ಮೆರವಣಿಗೆ ಮೂಲಕ ಕರೆದುಕೊಂಡು ಬರಲಾಯಿತು.

## ಗೋವಾದಲ್ಲಿ ಹೊಸ ವರ್ಷಾಚರಣೆಗೂ ಮುನ್ನ ಅನಧಿಕೃತ ನೈಟ್‌ಕ್ಲಬ್‌ಗಳಿಗೆ ಬೀಗ

ಪಣಜಿ ಡಿ 14 (ಪಿಟಿಐ)– ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಋತುವಿಗೆ ಮುಂಚಿತವಾಗಿ ಗೋವಾದ ರಾತ್ರಿಜೀವನದ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ, ನೈಟ್‌ಕ್ಲಬ್‌ನಲ್ಲಿ ಸಂಭವಿಸಿದ ಭೀಕರ ಬೆಂಕಿಯಲ್ಲಿ 25 ಜನರು ಸಾವನ್ನಪ್ಪಿದ ನಂತರ ರಾಜ್ಯ ಸರ್ಕಾರವು ನಿಯಮಗಳನ್ನು ಉಲ್ಲಂಘಿಸಿದ ಸಂಸ್ಥೆಗಳನ್ನು ಪರಿಶೀಲಿಸಲು ಮತ್ತು ಸೀಲ್ ಮಾಡಲು ತೀವ್ರ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ.

ರಮಣೀಯ ಕಡಲತೀರಗಳಿಗೆ ಹೆಸರುವಾಸಿಯಾದ ರಾಜ್ಯವು ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಅವಧಿಯಲ್ಲಿ ಅತ್ಯಂತ ಜನನಿಬಿಡ ಹದಿನೈದು ದಿನಗಳವರೆಗೆ ಸಜ್ಜಾಗುತ್ತಿರುವಾಗ, ಈ ಕ್ರಮವು ಈಗಾಗಲೇ ಕೆಲವು ನೈಟ್‌ಕ್ಲಬ್‌ಗಳನ್ನು ಮುಚ್ಚುವಂತೆ ಮಾಡಿದೆ, ಆದರೆ ಇತರರ ಭವಿಷ್ಯವು ಸಮತೋಲನದಲ್ಲಿದೆ.

ಜಿಲ್ಲಾಡಳಿತ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಮತ್ತು ಪೊಲೀಸರ ಸಿಬ್ಬಂದಿ ತಂಡವು ಉತ್ತರ ಗೋವಾ ಪ್ರವಾಸೋದ್ಯಮ ವಲಯದಲ್ಲಿರುವ ಎಲ್ಲಾ ನೈಟ್‌ಕ್ಲಬ್‌ಗಳನ್ನು ಪರಿಶೀಲಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿಸೆಂಬರ್ 6 ರಂದು ಉತ್ತರ ಗೋವಾದ ಅರ್ಪೋರಾದ ಬಿರ್ಚ್ ಬೈ ರೋಮಿಯೋ ಲೇನ್ ನೈಟ್‌ಕ್ಲಬ್‌ನಲ್ಲಿ ಸಂಭವಿಸಿದ ಬೆಂಕಿ–ಯ ಘಟನೆಯಲ್ಲಿ 25 ಜನರು ಸಾವನ್ನಪ್ಪಿದ ನಂತರ ಕಾರ್ಯಾಚರಣೆ ಪ್ರಾರಂಭವಾಯಿತು.ನಾವು ಎಲ್ಲಾ ನೈಟ್‌ಕ್ಲಬ್‌ಗಳನ್ನು ಪರಿಶೀಲಿಸುತ್ತಿದ್ದೇವೆ, ಅವುಗಳ ಪರವಾನಗಿಗಳು ಮತ್ತು ಅನುಮತಿಗಳನ್ನು ಪರಿಶೀಲಿಸುತ್ತಿದ್ದೇವೆ. ಮಾನದಂಡಗಳನ್ನು ಉಲ್ಲಂಘಿಸುತ್ತಿರುವುದು ಕಂಡುಬಂದ ಯಾವುದೇ ಕ್ಲಬ್ ಅನ್ನು ಸೀಲ್ ಮಾಡಲಾಗುತ್ತದೆ ಎಂದು ತಪಾಸಣಾ ತಂಡದ ಮುಖ್ಯಸ್ಥರಾಗಿರುವ ಸರ್ಕಾರಿ ಅಧಿಕಾರಿ ಕಬೀರ್ ಶಿರ್ಗಾಂವ್ಕರ್ ಪಿಟಿಐಗೆ ತಿಳಿಸಿದ್ದಾರೆ.

ನಿಯಮ ಉಲ್ಲಂಘಿಸುವ ಕ್ಲಬ್ ಅನ್ನು ತಕ್ಷಣವೇ ಮುಚ್ಚುವ ಅಧಿಕಾರವನ್ನು ತಂಡ ಹೊಂದಿದೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.ಇಲ್ಲಿಯವರೆಗೆ, ತಂಡವು ವಾಗೇಟರ್‌ನಲ್ಲಿರುವ ಎರಡು ಪ್ರಮುಖ ನೈಟ್‌ಕ್ಲಬ್‌ಗಳಾದ ಗೋಯಾ ಕ್ಲಬ್ ಮತ್ತು ಕೆಫೆ 2 ಗೋವಾವನ್ನು ಮುಚ್ಚಿದೆ. ಕೆಫೆ 2 ಗೋವಾ ಉತ್ತರ ಗೋವಾದ ಅರೇಬಿಯನ್ ಸಮುದ್ರವನ್ನು ನೋಡುತ್ತಿರುವ ಬಂಡೆಯ ಮೇಲೆ ನೆಲೆಗೊಂಡಿತ್ತು.ಶಿರ್ಗಾಂವ್ಕರ್ ಅವರು ಗೋಯಾ ಕ್ಲಬ್ ಅನ್ನು ಕೃಷಿ ಭೂಮಿಯಲ್ಲಿ ನಿರ್ಮಿಸಲಾಗಿದೆ ಎಂದು ಹೇಳಿದರು, ಆದರೆ ಕೆಫೆ 2 ಗೋವಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಹೊಂದಿಲ್ಲ ಮತ್ತು ರಚನಾತ್ಮಕ ಸ್ಥಿರತೆಯನ್ನು ಹೊಂದಿಲ್ಲ ಎಂದು ಹೇಳಿದರು.

Printed by , Published by, Owned by : basavaraj H , Printed and Published at Basavashree Printers and Publishers, H.No.1-11-54/32, Prashanth Colony, RAICHUR-584101. Editor. BASAVARAJ H